# 6

# ನೈತಿಕ ಶಿಕ್ಷಣದ ಅಪೇಕ್ಷೆಗಳು

## ಕಾರಣ, ಸದ್ಗುಣಗಳು ಮತ್ತು ಅಭ್ಯಾಸಗಳು

ಪಾಲ್ ಎಚ್. ಹರ್ಸ್ಟ್

ಈ ಅಧ್ಯಾಯದಲ್ಲಿ ನಾನು, ನೈತಿಕ ಶಿಕ್ಷಣದ ಕುರಿತು ನಮ್ಮ ಪ್ರಸ್ತಾವನೆಯನ್ನು ನಿರ್ಧರಿಸಬೇಕಾದ ಅತಿ ಮೂಲಭೂತ ಸಂಗತಿಗಳೆಂದು ನನಗನ್ನಿಸುವವುಗಳನ್ನು ನಿರ್ವಹಿಸಲು ಬಯಸುತ್ತೇನೆ. ನಾನು ಇದನ್ನು ಏಕೆ ಮಾಡುತ್ತಿದ್ದೇನೆಂದರೆ ನೈತಿಕ ಜೀವನಕ್ರಮ ಹಾಗೂ ನೈತಿಕ ಶಿಕ್ಷಣಗಳ ತಮ್ಮ ತಿಳುವಳಿಕೆಯನ್ನು ಏಕಾಭಿಪ್ರಾಯದ ಯಾವ ಪ್ರಕಾರಗಳ ಮೇಲೆ ನೆಲೆಯೂರಿಸಲು ಉದಾರ ಮನೋಭಾವದ ಶಿಕ್ಷಣವೇತ್ತರು ಬಯಸಿದ್ದರೋ ಅವುಗಳನ್ನು ಇತ್ತೀಚಿನ ಸಂಬಂಧಿತ ಸಾಮಾಜಿಕ ಹಾಗೂ ರಾಜಕೀಯ ಬದಲಾವಣೆಗಳು (ತತ್ತ್ವಶಾಸ್ತ್ರೀಯವಾದ ಮತ್ತು ಇತರ ಬೌದ್ಧಿಕ ಬೆಳವಣಿಗೆಗಳಂತೆಯೇ) ಈಗ ಅಪಾಯಕಾರಿಯಾಗಿ ಕಡೆಗಣಿಸಿವೆಯೆಂದು ನಾನು ಭಾವಿಸುತ್ತೇನೆ. ಹೆಚ್ಚು ಹೆಚ್ಚು ಸಂಘರ್ಷಮಯವಾದ ಸಾಮಾಜಿಕ ಒತ್ತಡಗಳು ಮತ್ತು ಹೆಚ್ಚು ತೀಕ್ಷ್ಣವಾದ ಧಾರ್ಮಿಕ, ಜನಾಂಗೀಯ, ರಾಷ್ಟ್ರೀಯ ಹಾಗೂ ರಾಜಕೀಯ ಮೂಲಭೂತವಾದಗಳ ಒಂದು ಸನ್ನಿವೇಶದಲ್ಲಿ, 1960 ಮತ್ತು 1970ರ ದಶಕಗಳಲ್ಲಿ ವ್ಯಾಪಕವಾಗಿ ಬೆಂಬಲಿಸಲ್ಪಟ್ಟಿದ್ದ ಉದಾರನೀತಿಯ ಬಗೆಗಿನ ವರ್ತಮಾನದ ಬೌದ್ಧಿಕ ವಿಮರ್ಶೆಯು ಅನೇಕರನ್ನು ಗೊಂದಲಗೊಳಿಸಿದೆಯಲ್ಲದೆ ನೈತಿಕ ಶಿಕ್ಷಣದ ವಿಚಾರವನ್ನು ಎಷ್ಟು ಉತ್ತಮವಾಗಿ ಕಲ್ಪಿಸಿಕೊಳ್ಳಬಹುದೆಂಬ ಬಗ್ಗೆ ಗಂಭೀರತಮ ಅನಿಶ್ಚಿತತೆಯು ತಲೆದೋರಿದೆಯೆಂದು ನಾನು ಭಾವಿಸುತ್ತೇನೆ. ನಮಗೆ ಎದುರಾಗಿರುವ ಸಂಕೀರ್ಣ ಸಾಮಾಜಿಕ ಮತ್ತು ವೈಚಾರಿಕ ಬದಲಾವಣೆಗಳ ಬಗ್ಗೆ ನಾನು ಇಲ್ಲಿ ಕಳಕಳಿ ತೋರಿಸುವುದಿಲ್ಲ. ಆದರೆ ನೈತಿಕತೆ ಹಾಗೂ ನೈತಿಕ ಶಿಕ್ಷಣದ ಪ್ರಾಥಮಿಕ ತಿಳುವಳಿಕೆಯ ಮೇಲೆ ಪರಿಣಾಮ ಉಂಟುಮಾಡುತ್ತಿರುವ ಬೌದ್ಧಿಕ ಬದಲಾವಣೆಗಳನ್ನು ಗುರುತಿಸಲೆಂದು ಮಾತ್ರ ಇವುಗಳನ್ನು ವಿಮರ್ಶಿಸಲು ಪ್ರಯತ್ನಿಸುತ್ತೇನೆ. ನನ್ನ ಕಾಳಜಿಗಳು ಪ್ರಾಥಮಿಕವಾಗಿ ತತ್ತ್ವಶಾಸ್ತ್ರೀಯವಾದವುಗಳು.

ನೈತಿಕ ಜೀವನವು ಅವಶ್ಯವಾಗಿ ವಿವೇಕಯುಕ್ತ ಜೀವನವಾಗಿರುವ ಹಿನ್ನೆಲೆಯಲ್ಲಿ, ನೈತಿಕ ವಿವೇಚನೆಯ ಅಭಿವೃದ್ಧಿಯನ್ನು ನೈತಿಕ ಶಿಕ್ಷಣದಲ್ಲಿ ಎಲ್ಲದಕ್ಕೂ ಮೂಲವೆಂಬಂತೆ ಕಾಣಬೇಕೆಂದು ನಮಗೆ ಮನವರಿಕೆಯಾಗಿರುವುದರಿಂದ, ನಮ್ಮಲ್ಲಿ ಅನೇಕರು ದೀರ್ಘಕಾಲದಿಂದ ಸಮರ್ಥಿಸಿರುವ ಸ್ತರದಿಂದಲೇ ಗಮನಿಸಲು ಪ್ರಾರಂಭಿಸುತ್ತೇನೆ. ಅಲ್ಲಿಂದ ನಾನು ನೈತಿಕ ಜೀವನ ಮತ್ತು ನೈತಿಕ ಶಿಕ್ಷಣವು, ಸ್ಥಿರವಾಗಿ ಬೆಳೆಸಿಕೊಂಡ ವೈಯಕ್ತಿಕ ಹಾಗೂ ಸಾಮಾಜಿಕ ನೈತಿಕ ಸದ್ಗುಣಗಳ ಒಂದು ಸೀಮಾರೇಖೆಯ ಒಳಗೆ ಅತ್ಯಂತ ಪೂರ್ಣವಾಗಿ ಸಾಧಿಸಿಕೊಳ್ಳಬಹುದಾದ, ವೈಯಕ್ತಿಕ ಸಂಪ್ರಾಪ್ತಿಗೆ ಸೀಮಿತಗೊಳ್ಳಬೇಕೆಂದು ಒತ್ತಾಯಿಸಿರುವ ಒಂದು ತದ್ವಿರುದ್ಧ ದೃಷ್ಟಿಕೋನದ ಕಡೆಗೆ ಸಾಗುತ್ತೇನೆ. ಈ ಆಯಾಮಗಳ ಮೂಲ ಕಾಳಜಿಗಳು ನೈತಿಕ ಶಿಕ್ಷಣದಲ್ಲಿ ಮಹತ್ತ್ವಪೂರ್ಣವಾದವುಗಳೆಂಬ ಬಗ್ಗೆ ನಾನು ಸಂಶಯಪಡುವುದಿಲ್ಲ. ಆದರೆ, ಅವೆರಡೂ ನೈತಿಕ ವಿವೇಚನೆ ಹಾಗೂ ನೈತಿಕ ಸದ್ಗುಣಗಳ ಲಕ್ಷಣ ಹಾಗೂ ಮಹತ್ತ್ವಗಳ ಕುರಿತು ಗಂಭೀರ ಅಪಾರ್ಥಗಳ ಮೇಲೆ ಆಧಾರಗೊಂಡಿವೆ ಎಂದಷ್ಟೇ ನಾನು ವಾದಿಸುತ್ತೇನೆ. ನಾನು ಸಮರ್ಥಿಸಲು ಬಯಸುವುದು ಏನೆಂದರೆ ನೈತಿಕ ಜೀವನದಲ್ಲಿ, ವಿವೇಚನೆ ಮತ್ತು

ಸದ್ಗುಣಗಳು ಯಾವುದರ ಹೊರತಾಗಿ ಜೊಳ್ಳು ಹಾಗೂನಿರ್ಜೀವ ಕಾಳಜಿಗಳಾಗುತ್ತವೆಯೋ ಅಂಥ ಸಾಮಾಜಿಕ ನಡವಳಿಕೆಗಳ ಸಂಕೀರ್ಣ ಸಂಕಲನಗಳ ಪ್ರಾವೀಣ್ಯ ಮತ್ತು ಬಾಧ್ಯತೆಯುಲ್ಲಬೇರೂರಿದ್ದು, ಲಂಗರು ಹಾಕಿರಬೇಕು ಎಂದು. ನೈತಿಕ ಜೀವನವು ಅವಶ್ಯವಾಗಿ ಸಾಮಾಜಿಕವಾಗಿ ಬೆಳೆದ ಮತ್ತು ಸಾಮಾಜಿಕವಾಗಿ ಅನುಷ್ಠಾನಿಸಿದ ಅಭ್ಯಾಸಗಳ ಒಂದು ವಿಷಯವಾಗಿದೆ. ನೈತಿಕ ವಿವೇಚನೆ ಹಾಗೂ ನೈತಿಕ ಸದ್ಗುಣಗಳನ್ನು ಅವು ಯಾವುದರಲ್ಲಿ ಹಾಸುಹೊಕ್ಕಾಗಿವೆಯೋ ಅಂಥ ಅಭ್ಯಾಸಗಳಿಂದಲೇ ನಾವು ಬೇರ್ಪಡಿಸಿಬಿಟ್ಟರೆ, ನಾವು ನಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಜೀವನವನ್ನು ವಿನಾಶಕ್ಕೆ ತಳ್ಳುತ್ತೇವೆ. ನೈತಿಕ ವಿವೇಚನೆ ಹಾಗೂ ನೈತಿಕ ಸದ್ಗುಣಗಳನ್ನು ಸ್ವತಂತ್ರ ಸ್ವಾಯತ್ತ ವೈಯಕ್ತಿಕ ನೈತಿಕ ಜೀವನಕ್ಕೆ ಪ್ರತ್ಯೇಕವಾಗಿ ಅಥವಾ ಸಾಮೂಹಿಕವಾಗಿ ಸಮುಚಿತವೆನಿಸುವ ವೈಯಕ್ತಿಕ ಸಾಧನೆಗಳು ಮಾತ್ರವೆಂದು ಕಾಣಲು ನಾವು ಒತ್ತಾಯಿಸುವುದಾದರೆ, ನಮ್ಮ ಹಾಗೂ ನಮ್ಮ ಸಮಾಜದ ಬಗ್ಗೆ ನಮ್ಮ ಆಶೋತ್ತರಗಳ ಸೋಲನ್ನು ನಾವು ಅನಿವಾರ್ಯವಾಗಿ ಕಾಣಲಿದ್ದೇವೆ. ದೈನಂದಿನ ಜೀವನದ ಸಾಮಾಜಿಕ ಅಭ್ಯಾಸಗಳ ನಿರ್ದಿಷ್ಟ ಸಂಕೀರ್ಣ ವಾಸ್ತವಗಳಿಂದ ವಿವೇಚನೆ ಹಾಗೂ ಸದ್ಗುಣಗಳ ಈ ಬೇರ್ಪಡಿಸುವಿಕೆಯೇ ನೈತಿಕ ಶಿಕ್ಷಣದ ಕುರಿತು ನಮ್ಮ ದೃಷ್ಟಿಕೋನಗಳನ್ನು ವಿನಾಶಕಾರಿಯಾಗಿ ಅಧೋಗತಿಗಿಳಿಸಿದ್ದಲ್ಲದೆ ಅವುಗಳ ಸಾಮರ್ಥ್ಯವನ್ನೇ ಕುಗ್ಗಿಸಿಬಿಟ್ಟಿದೆ. ಅದರಿಂದಾಗಿ ನಮ್ಮ ಪರಿಶ್ರಮಗಳು ಯುವಪೀಳಿಗೆಗೆ ಅಸಂಗತವಾಗಿಬಿಟ್ಟಿವೆ. ನಾವು ಮಾಡಬೇಕಾದದ್ದು ಏನೆಂದರೆ ಯಾವುದರ ಪರಿಮಿತಿಯಲ್ಲಿ ವೈಯಕ್ತಿಕ ಕೃತಕೃತ್ಯತೆಯನ್ನು ಕಂಡುಕೊಳ್ಳಬೇಕೋ ಅಂಥ ಸಾಕಷ್ಟು ನಿರ್ದಿಷ್ಟವಾಗಿ ಅಸ್ತಿತ್ವದಲ್ಲಿರುವ ಮತ್ತು ತರ್ಕಾಧಾರಿತವಾಗಿ ವಿಕಸಿತವಾಗುತ್ತಿರುವ ಸಾಮಾಜಿಕ ಅಭ್ಯಾಸಗಳ ಯಶಸ್ವೀ ಹುಡುಕಾಟವನ್ನು ಪೋಷಿಸುವ ರೀತಿಯ ನೈತಿಕ ಜೀವನ ಹಾಗೂ ನೈತಿಕ ಶಿಕ್ಷಣವನ್ನು ಪುನಃ ರೂಪುಗೊಳಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಆದರೆ ನಾನು ಏನು ಮಾಡಲು ಪ್ರಯತ್ನಿಸುತ್ತಿದ್ದೇನೋ ಅದಿನ್ನು (ಪೀಠಿಕೆ) ಸಾಕು. ನನ್ನ ಕೆಲಸವನ್ನು ಆರಂಭ ಮಾಡುತ್ತೇನೆ.

## ನೈತಿಕ ವಿವೇಚನೆಯ ಬೆಳವಣಿಗೆ

1960 ಮತ್ತು 1970ರ ದಶಕಗಳಲ್ಲಿ ಕ್ಯಾಂಟ್ ಅವರ ಶೈಲಿಯ ವಿವೇಚನೆಯ ತತ್ತ್ವಗಳ ಮೇಲೆ, ಸಂಪೂರ್ಣವಾಗಿ ಅಲ್ಲದಿದ್ದರೂ, ವ್ಯಾಪಕವಾಗಿ ಆಧರಿಸಿದ ನೈತಿಕ ಜೀವನ ಹಾಗೂ ನೈತಿಕ ಶಿಕ್ಷಣದ ಒಂದು ಸೂಕ್ಷ್ಮಾಭಿರುಚಿಯ ಪರಿಗಣನೆಯ ಬೆಂಬಲಕ್ಕಾಗಿ ಅತ್ಯಂತ ಪ್ರಬಲವಾದ ವಾದವು ಹರಡಲ್ಪಟ್ಟಿತು. ಈ ಮಾತುಗಳಲ್ಲಿ ನೈತಿಕ ಜೀವನವು ಕ್ಯಾಂಟ್ ಅವರ 'ಒಳ ಅರಿವಿನ ಸಿದ್ಧಾಂತ' ದ ಒಂದು ಪ್ರಕಾರದಿಂದ ಸಮರ್ಥಿಸಲ್ಪಡಬಹುದಾದ ಧ್ಯೇಯಪೂರ್ಣ, ಜಾಗತಿಕ ಮಟ್ಟದ ವಿವೇಚನಾ ತತ್ತ್ವಗಳ ಒಂದು ಸಂಕಲನಕ್ಕೆ ಆದರ್ಶಪ್ರಾಯವಾಗಿ ವಿಧೇಯವಾದ ಒಂದು ಜೀವನ ಎಂಬಂತೆ ನೋಡಲ್ಪಟ್ಟಿದೆ. ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸಮಾನ ಉಪಚಾರಗಳನ್ನು, ವೈಯಕ್ತಿಕ ಅಭಿರುಚಿಗಳು ಮತ್ತು ಸತ್ಯವಚನಗಳನ್ನು ಪೋಷಿಸುವಂಥ ತತ್ತ್ವಗಳು; ನೈತಿಕ ಜೀವನವನ್ನು ಸಂವಿಧಾನಾತ್ಮಕವಾಗಿ ವ್ಯಾಖ್ಯಾನಿಸುವವುಗಳು ಎಂದು ಗ್ರಹಿಸಲ್ಪಡುತ್ತವೆ. ಆಗ ನೈತಿಕ ಜೀವನವೆಂಬುದು ನಮ್ಮನ್ನು ನಾವೆಲ್ಲಿ ಕಂಡುಕೊಳ್ಳುತ್ತೇವೋ ಅಂಥ ಸಹಜ, ವೈಯಕ್ತಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಗೆ ವಿಧೇಯತೆಯನ್ನು ಅತ್ಯಧಿಕಗೊಳಿಸಲೋಸ್ಕರ ವಿವೇಚನಾಪೂರ್ವಕವಾಗಿ ಈ ತತ್ತ್ವಗಳನ್ನು ಅನ್ವಯಿಸುವಂತಹ ಒಂದು ವಿಷಯವಾಗುತ್ತದೆ. ಮಾನವ ಸ್ವಭಾವ ಮತ್ತು ನಮ್ಮ ಪರಿಸರವು ಕಡೇ ಪಕ್ಷ ದೈಹಿಕ ಸೌಖ್ಯ, ವ್ಯಕ್ತಿಗತ ಸಂಬಂಧಗಳು ಮತ್ತು ರಾಜಕೀಯ ವ್ಯವಸ್ಥೆಗಳಿಗೆ ಒತ್ತುಕೊಡುವ ಒಂದು ಕನಿಷ್ಠ ಸಂಖ್ಯೆಯ ಬಹುಮಟ್ಟಿನ ಸಾರ್ವತ್ರಿಕ ಪ್ರಾಯೋಗಿಕ ನಿಯಮಗಳಿಗೆ ದಾರಿ

ಮಾಡಿಕೊಡುವುದಾದರೂ, ಬೇರೆ ಪರಿಸ್ಥಿತಿಗಳಲ್ಲಿ ಈ ತತ್ತ್ವಗಳು ಭಿನ್ನವಾದ ಸಾಮಾಜಿಕ ಅಭ್ಯಾಸಗಳು ಮತ್ತು ವ್ಯವಸ್ಥೆಗಳಿಗೆ ದಾರಿ ಮಾಡಿಕೊಡಬಹುದು. ಆದರೆ ಇವುಗಳಿಂದಾಚೆ ಇವುಗಳಿಗೆ ಸಕಲಾಂಶಗಳಲ್ಲಿ ಹತ್ತಿರವಾದ ಒಂದೇ ಒಂದು ನೈತಿಕವಾಗಿ ಸಮ್ಮತವಾದ ಸಾಮಾಜಿಕ ಜೀವನದ ನಿರ್ದಿಷ್ಟ ನಮೂನೆಯು ಇದೆಯೆಂದಾಗಲೀ ಅಥವಾ ಒಬ್ಬ ನಿರ್ದಿಷ್ಟ ವ್ಯಕ್ತಿಗೋಸ್ಕರ ನೈತಿಕವಾಗಿ ಒಳ್ಳೆಯ ಜೀವನದ ಒಂದೇ ಒಂದು ಮಾದರಿಯು ಇದೆಯೆಂದಾಗಲೀ ಭಾವಿಸಲು ಯಾವುದೇ ಕಾರಣವಿಲ್ಲ.

ಯಾವುದರ ಪ್ರಕಾರ - ವಿವೇಚನೆ ಮತ್ತು ವಿವೇಚನೆಯು ಮಾತ್ರ ಮೊದಲಿಗೆ ನೈತಿಕತೆಯ ಮೂಲಭೂತ ತತ್ತ್ವಗಳನ್ನು ನಿರ್ಧರಿಸಬಲ್ಲುದು ಮತ್ತು ನಂತರದಲ್ಲಿ, ಅದರ ಆಧಾರದಲ್ಲಿ ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ನೈತಿಕ ಜೀವನದ ವಿವರಗಳು... ಎಂದು ಹೇಳಲಾಗಿದೆಯೋ ಅಂಥ ದೃಷ್ಟಿಕೋನವು ಮಾನವ ಸ್ವಭಾವದ ಬಗ್ಗೆ ಕೆಲವು ಗ್ರಹಿಕೆಗಳನ್ನು ಆಧರಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ, ನಮ್ಮ ಗ್ರಹಣ ಸಾಮರ್ಥ್ಯಗಳು ಕನಿಷ್ಠ ತಾತ್ತ್ವಿಕವಾಗಿಯಾದರೂ ಇತರರಿಂದ ಏಕಾಂಗಿಯಾಗಿ ನಮ್ಮ ಸ್ವಭಾವದಲ್ಲಿ - ವಿಶೇಷವಾಗಿ ನಮ್ಮ ಬಯಕೆಗಳು, ಭಾವನೆಗಳು, ಒಲವುಗಳಲ್ಲಿ - ನಾವೇನು ಮಾಡಬೇಕೆಂದು ನಿರ್ಣಯಿಸುವಲ್ಲಿ ಕೆಲಸ ಮಾಡಲು ಶಕ್ತವಾಗಿವೆ ಎಂದು ಅದು ಭಾವಿಸುತ್ತದೆ. ಆಮೇಲೆ ಅದು ನಮ್ಮನ್ನು; ವಿವೇಚನೆಯ ನಿರ್ದೇಶನವನ್ನು, ಅದರ ನಿರ್ಣಯಗಳಿಗೆ ಅನುಸಾರವಾಗಿ ನಮ್ಮ ಎಲ್ಲ ಇತರ ಸಾಮರ್ಥ್ಯಗಳು ಕೆಲಸ ಮಾಡುವಂತೆ ಲಗಾಮು ಹಾಕಿ, ಅನುಸರಿಸಲು ಶಕ್ತರಿರುವುದಾಗಿ ಕಾಣುತ್ತದೆ. ಈ ರೀತಿ ಪರಿಣಾಮದಲ್ಲಿ ಮತ್ತು ಭಾವನೆಯಲ್ಲಿ, ಪ್ರವೃತ್ತಿಯಲ್ಲಿ ಮತ್ತು ನಿಲುವಿನಲ್ಲಿ ಕಡೇ ಪಕ್ಷ ತಾತ್ತ್ವಿಕವಾಗಿಯಾದರೂ ವಿವೇಚನೆಯನ್ನು ಅನುಸರಿಸಲು, ವಿವೇಚನಾತ್ಮಕವಾಗಿ ಸ್ವಾಯತ್ತ ನೈತಿಕ ಜೀವನವನ್ನು, ವಿವೇಚನೆಯಿಂದ ನಿರ್ಧಾರಿತವಾದ ತತ್ತ್ವಗಳಲ್ಲಿ ಬೇರೂರಿದ ಜೀವನವನ್ನು, ಜೀವಿಸಲು ನಾವು ಶಕ್ತರಿದ್ದೇವೆ.

ಈ ದೃಷ್ಟಿಕೋನದ ಪ್ರಕಾರ, ನೈತಿಕ ಶಿಕ್ಷಣವು ತನ್ನ ಅಂತರಾಳದಲ್ಲಿ, ವಿವೇಚನಾತ್ಮಕ ಬದುಕನ್ನು, ಅದೇ ನೈತಿಕ ಜೀವನದ ಲಕ್ಷಣವಾಗಿದೆಯೆಂಬ ಕಾರಣಕ್ಕಾಗಿ, ಸಂವಿಧಾನಗೊಳಿಸುವ ಮೂಲಭೂತ ನೈತಿಕ ತತ್ತ್ವಗಳ ಗ್ರಹಣಕ್ಕೆ ದಾರಿ ತೋರಿಸುವಂಥ ಅರಿವಿನ ಬೆಳವಣಿಗೆಯ ಬಗ್ಗೆ ಕಾಳಜಿ ಹೊಂದಿದೆ. ಈ ತತ್ತ್ವಗಳ ಇಂಗಿತಾರ್ಥಗಳನ್ನು ಕಾರ್ಯಗತಗೊಳಿಸಲಾಗುವಂತೆ ಮತ್ತು ಅಭ್ಯಾಸದಲ್ಲಿ ನಾವೇನು ಮಾಡಬೇಕೆಂಬ ಬಗ್ಗೆ ವಿವೇಚನಾಯುಕ್ತ ಆಯ್ಕೆಗಳನ್ನು ಮಾಡಿಕೊಳ್ಳಲಾಗುವಂತೆ ನಾವು ವಾಸಿಸುತ್ತಿರುವ ಸಹಜ, ವೈಯಕ್ತಿಕ ಮತ್ತು ಸಾಮಾಜಿಕ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಬೇಕಾದ ಶಿಕ್ಷಣವನ್ನು ಅದು ಅಪೇಕ್ಷಿಸುತ್ತದೆ. ಈ ವಿವೇಚನಾಯುಕ್ತ ಅರಿವಿನ ಬೆಳವಣಿಗೆಯ ಜೊತೆಯಲ್ಲಿ ವ್ಯಕ್ತಿಯ ಭಾವನಾತ್ಮಕ ಮತ್ತು ಸಹಜ ಸಾಮರ್ಥ್ಯಗಳ ಶಿಸ್ತುಬದ್ಧ ಹೊಂದಾಣಿಕೆಯು ಅವಶ್ಯವಿರುವುದರಿಂದ ವಿವೇಚನಾತ್ಮಕವಾಗಿ ನೆಲೆಗೊಂಡ ಸದ್ಗುಣಗಳ ಬೆಳವಣಿಗೆಯ ಬಗ್ಗೆ ವ್ಯಕ್ತಿಯ ಭಾವನೆಗಳು ಮತ್ತು ಪ್ರೇರಣೆಗಳನ್ನು ರಚಿಸುವಂತೆ ವಿವೇಚನೆಯ ಬೇಡಿಕೆಗಳು ಮಂಡಿಸಲ್ಪಡಬೇಕು. ಹೀಗೆ ನೈತಿಕ ಜೀವನವು ಉದ್ದಕ್ಕೂ ವಿವೇಚನಾಯುಕ್ತ ಯೋಚನೆ ಮತ್ತು ನಿರ್ಣಯ, ವಿವೇಚನಾಯುಕ್ತ ಕಾರ್ಯಗಳು ಮತ್ತು ವಿವೇಚನಾಯುಕ್ತ ಚಾರಿತ್ರ್ಯದಿಂದ ಅಂಕಿತಗೊಂಡ ಜೀವನವಾಗಿ ಸಾಧಿಸಲ್ಪಡುತ್ತದೆ. ಹುಟ್ಟುತ್ತಾ ಮಾನವ ಜೀವಿಗಳು ಅರಿವಿನಲ್ಲಿ, ಭಾವದಲ್ಲಿ ಮತ್ತು ಕ್ರಿಯಾತ್ಮಕವಾಗಿ

ಅಸಂಸ್ಕೃತರಾಗಿರುತ್ತಾರೆಂದು ಭಾವಿಸಿಕೊಂಡರೆ, ಆಗ ನಾವು, ಪ್ರಕ್ರಿಯೆಯನ್ನು ಗೊಂದಲಪಡಿಸದೆ ಅಥವಾ ತಡೆಯೊಡ್ಡದೆ ಇದ್ದರೆ, ಕಡೇ ಪಕ್ಷ ಅವರನ್ನು ಈ ನಿಬಂಧನೆಗಳಲ್ಲಿ ವಿವೇಚನಾಯುಕ್ತ ನೈತಿಕ ಜೀವನದೊಳಕ್ಕೆ ಸುಶಿಕ್ಷಿತಗೊಳಿಸಬಹುದು ಎಂಬ ಆಶೆ ಇದೆ. ಯಾವುದೇ ಲೆಕ್ಕದಲ್ಲಾದರೂ, ನೈತಿಕ ಶಿಕ್ಷಣಕ್ಕೆ ಮೂಲತಃ ಬೇಕಾದುದು ಒಂದಷ್ಟು ಸ್ಪಷ್ಟತೆಯೊಂದಿಗೆ ಇಲ್ಲಿ ಪ್ರಸ್ತುತವಾಗಿದ್ದು, ಇದರಿಂದ ನಾವು ಅದರ ಪ್ರಾಯೋಗಿಕ ಕೋರಿಕೆಗಳನ್ನು ಮುಂದೆ ಕ್ರಮಿಕ ಗತಿಯಲ್ಲಿ ಗುರುತಿಸಬಹುದೆಂದು ಆಶಿಸಬಹುದು.

**ವಿವೇಚನಾತ್ಮಕ ದೃಷ್ಟಿಕೋನದ ಪರಿಮಿತಿಗಳು**

ಆದರೆ ಈ ದೃಷ್ಟಿಕೋನವು ಅನೇಕ ರೀತಿಗಳಲ್ಲಿ ಒಪ್ಪಿಗೆಯಾಗುವಂತಿದ್ದರೂ, ಇದರಲ್ಲಿ ಗಂಭೀರವಾದ ಕಾಠಿಣ್ಯಗಳಿವೆ. ಮೊದಲನೆಯದಾಗಿ, ಅಮೂರ್ತ ಸೈದ್ಧಾಂತಿಕ ಆಧಾರದಲ್ಲಿ ವಾಸ್ತವವಾಗಿ ನಾವು ಪ್ರಬಲ ಸಾರ್ವತ್ರಿಕ ನೈತಿಕ ತತ್ತ್ವಗಳ ಒಂದು ಮಾನ್ಯವಾದ ಸಂಕಲನವನ್ನು ನಿರ್ಧರಿಸಬಲ್ಲೆವೆ? ಈ ತತ್ತ್ವಗಳು ಮಾನವ ಕ್ರಿಯೆಯ ಎಲ್ಲಾ ವಿವೇಚನಾತ್ಮಕ ಪರಿಗಣನೆಗೆ ಅವಶ್ಯಕವಾಗಿವೆಯೆಂಬುದನ್ನು ತೋರಿಸುವ 'ಅರಿವಿನ ವಾದ'ದ ಒಂದು ಮಾನ್ಯವಾದ ನಮೂನೆಯಿದೆಯೆ? ಮತ್ತು ಒಂದು ಪಕ್ಷ ಯಾವುದೇ ಅರ್ಥದಲ್ಲಿ ಇದೆಯೆಂದಾದರೂ, ಈ ತತ್ತ್ವಗಳು ನಿರ್ದಿಷ್ಟ ಸನ್ನಿವೇಶಗಳಲ್ಲಿ ಏನು ಮಾಡಬೇಕೆಂಬ ಬಗ್ಗೆ ಸ್ಪಷ್ಟವಾದ ವಿವೇಚನಾಯುಕ್ತ ನಿರ್ಣಯಗಳ ಕಡೆಗೆ ಕರೆದೊಯ್ಯಬಲ್ಲವೆ? ಈ ದೃಷ್ಟಿಕೋನವು ವಿಮರ್ಶಾತ್ಮಕ ಚರ್ಚೆಯಲ್ಲಿ ಇನ್ನೂ ಹೆಚ್ಚಾಗಿ ಅನ್ವೇಷಿಸಲ್ಪಟ್ಟಂತೆಲ್ಲಾ, ಈ ಅತಿ ಸಾಮಾನ್ಯ ಸಾಂಪ್ರದಾಯಿಕ ತತ್ತ್ವಗಳು; ಸ್ವಾತಂತ್ರ್ಯಗಳು ಮತ್ತು ನಿಜಜೀವನದ ಸಮಾನತೆಗಳ ಕುರಿತು ಏನನ್ನೂ ನಿರ್ವಹಿಸಿದಿರುವುದು ಮತ್ತೂ ಹೆಚ್ಚಾಗಿ ಕಂಡುಬಂದಿದೆ. ಬದಲಿಗೆ ಆಚರಣೆಯಲ್ಲಿ ನಾವು ನಿಜವಾಗಿ ಏನು ಮಾಡುವೆವೋ ಆ ಬಗ್ಗೆ ಅಲ್ಪವಾದರೂ  ವಾಸ್ತವಿಕತೆಯನ್ನು ಸ್ವೀಕರಿಸದ ಅಸ್ಪಷ್ಟ ಆದರ್ಶ ಕಲ್ಪನೆಗಳೊಂದಿಗೆ ಇವನ್ನು ಕಾಣಬಹುದಾಗಿದೆ. ಅವು ನಿರೂಪಿಸುವ ಸಂಬಂಧವಿಲ್ಲದ ಸೈದ್ಧಾಂತಿಕವಾದ ಮುನ್ನೋಟವು ವಾಸ್ತವವಾಗಿ, ಯಾವುವುಗಳ ಬಗ್ಗೆಯೇ ಖಚಿತವಾಗಿ ನೈತಿಕತೆಯು ಇದೆಯೋ ಅಂಥ, ಸಮಕಾಲೀನ ಪ್ರಾಯೋಗಿಕ ಜೀವನದ ಸೂಕ್ಷ್ಮ ವಿವರಗಳನ್ನು ಒಳಗೊಳ್ಳದಿರುವುದು ಕಂಡುಬಂದಿದೆ. ಈ ತತ್ತ್ವಗಳನ್ನು, ಸೈದ್ಧಾಂತಿಕವಾಗಿ ಸಮರ್ಥಿಸಲು ಸಾಧ್ಯವಾಗುವಂತೆ, ಇನ್ನೂ ಹೆಚ್ಚು ನಿಖರವಾಗಿ ಪ್ರತಿಪಾದಿಸಿದಂತೆಲ್ಲಾ, ಅವು ಎಲ್ಲಾ ಪ್ರಾಯೋಗಿಕ ಉದ್ದೇಶಳಿಗೆ ಮತ್ತೂ ಹೆಚ್ಚು  ಖಾಲಿಯಾಗಿ ಬಿಡುತ್ತವೆ.

ಈ ದೃಷ್ಟಿಕೋನದಲ್ಲಿ ಅಷ್ಟೇ ಅಸಮರ್ಥನೀಯವಾದುದು; ಅದು ಆಧರಿಸಿರುವ, ವಿವೇಚನೆಯಿಂದ ಕೂಡಿದ ಕ್ರಿಯೆಗಳನ್ನು ಉಳಿದ ಇತರ ಎಲ್ಲಾ ಮಾನವ ಸ್ವಭಾವದ ಅಂಶಗಳಿಂದ, ವಿಶೇಷವಾಗಿ ನಮ್ಮ ಭಾವನೆಗಳು ಮತ್ತು ಆಸಕ್ತಿಗಳಿಂದ ನೈತಿಕ ತತ್ತ್ವಗಳು ಶುದ್ಧವಾದ ಅರಿವಿನೊಂದಿಗೇ ನಿರ್ಧರಿಸಲ್ಪಡಲು ಸಾಧ್ಯವಾಗುವಂತೆ ಬೇರ್ಪಡಿಸಿಬಿಡಬಹುದು ಎಂಬ ನಂಬಿಕೆ. ನಮ್ಮನ್ನೂ ಒಳಗೊಂಡಂತೆ, ನಾವು ಪರಿಶೀಲಿಸುವ ಎಲ್ಲವನ್ನೂ ಅನಾಸಕ್ತವಾಗಿ, ವೀಕ್ಷಕನಂತೆ, ವಸ್ತುನಿಷ್ಠವಾಗಿ ತಿಳಿಯುವುದು; ವಿವೇಚನೆಯ ಕಾರ್ಯವೈಖರಿಯ ಒಂದು ನಿಷ್ಕೃಷ್ಟವಾದ ಲೆಕ್ಕಾಚಾರವಾಗಿರದೆ ನಿಶ್ಚಿತವಾಗಿ ಬರೀ ಒಂದು ಆದರ್ಶವಾಗಿಸಲ್ಪಟ್ಟ ಮಿಥ್ಯೆಯಾಗಿದ್ದು; ಒಂದು ಪಕ್ಷ ನೈತಿಕ

ನಿರ್ಣಯಗಳಿಗೆ ಅಗತ್ಯವಾದ ವಸ್ತುನಿಷ್ಠವಾದ ತಿಳುವಳಿಕೆಯು ಶಕ್ಯವಿದ್ದರೂ ಸಹ, ಆಗ ನಮ್ಮ ವಿವೇಚನಾತ್ಮಕ ತೀರ್ಮಾನಗಳು ವಿವೇಚನಾತ್ಮಕವಾಗಿ ಸದ್ಗುಣಭರಿತವಾದ ಜೀವನವನ್ನು ಉತ್ಪತ್ತಿ ಮಾಡುವಂತೆ ನಮ್ಮ ಕ್ರಿಯಾತ್ಮಕ ಹಾಗೂ ಸಹಜಾತ ನಡವಳಿಕೆಯೊಳಗೆ ವ್ಯವಸ್ಥಿತವಾಗಿ ಮತ್ತು ಸುಸಂಬದ್ಧವಾಗಿ ಸಂರಚಿಸಲ್ಪಡಬಹುದೆಂದು ನಾವು ನಿಜವಾಗಿ ನಂಬಬಹುದೆ? ವಾಸ್ತವವಾಗಿ ಇಲ್ಲಿ ನಮ್ಮಲ್ಲಿ ಇರುವುದು ಸರಳವಾಗಿ, ಎಲ್ಲ ಇತರ ಬೇಡಿಕೆ ಮತ್ತು ಬಯಕೆಗಳು ವಿವೇಚನೆಯ ಬೇಡಿಕೆಗಳಿಗೆ ವಿಧೇಯವಾಗಿರಲಾಗಿ, ವಿವೇಚನೆಯನ್ನು ಸಂತೃಪ್ತಿಗೊಳಿಸುವುದಕ್ಕೆ ಬದ್ಧವಾದ ಜೀವನವೊಂದರ ಚಿತ್ರ. ಮಾನವ ಸ್ವಭಾವದ ಈ ಮಾದರಿ, ಅದರ ಸಾಮರ್ಥ್ಯಗಳು ಮತ್ತು ಅವುಗಳ ಪರಸ್ಪರ ಸಂಬಂಧವು ಒಂದು ತತ್ತ್ವಶಾಸ್ತ್ರೀಯವಾದ ಕಲ್ಪನಾತಿರೇಕವೆಂದು ನಾನು ಸೂಚಿಸುತ್ತೇನೆ. ಮಾನವ ಜೀವಿಗಳು ತಮ್ಮ ಸ್ವಭಾವದಲ್ಲಿ ಜ್ಞಾನಾತ್ಮಕ ಸಾಮರ್ಥ್ಯವನ್ನು ಹೊಂದಿದ್ದು, ಕ್ರಿಯಾತ್ಮಕವಾಗಿ ವಿಭಿನ್ನವಾದ, ಇನ್ನಿತರ ಮಾನವ ಸ್ವಭಾವದ ಆಂಶಗಳನ್ನು ತಮ್ಮ ವಶ ಮಾಡಿಕೊಳ್ಳಬಲ್ಲ, ಸಾಮರ್ಥ್ಯದ ಕಟ್ಟುಗಳು ಮಾತ್ರ ಅಲ್ಲ. ನಿಜವಾಗಿ ನಾವು ವಿಸ್ತಾರ ವೈವಿಧ್ಯವುಳ್ಳ ಅರಿವಿನ, ಭಾವನಾತ್ಮಕವಾದ ಮತ್ತು ಸಹಜವಾದ ಸಾಮರ್ಥ್ಯಗಳಿಂದ ಕೂಡಿದ ಜೀವಿಗಳು, ಆದರೆ ಇವು ವಿಶ್ಲೇಷಣಾತ್ಮಕ ಹಾಗೂ ಅಸ್ಪಷ್ಟ ಸೈದ್ಧಾಂತಿಕ ಪರಿಭಾಷೆಗಳಲ್ಲಿ ಭಾಗಶಃ ಮತ್ತು ಕೃತಕವಾಗಿ ಮಾತ್ರ ಬೇರೆ ಬೇರೆಯಾಗಿ ಪ್ರತ್ಯೇಕಿಸಬಹುದು. ಕಾರ್ಯರೂಪದಲ್ಲಿ ಈ ಅಂಶಗಳು ಬಿಡಲಾಗದಂತೆ ಪರಸ್ಪರ ಸಂಬದ್ಧವಾದವುಗಳು, ವಿಶ್ಲೇಷಣಾತ್ಮಕವಾಗಿ ಬೇರ್ಪಡಿಸಲ್ಪಟ್ಟ ಆ ಆಂಶಗಳನ್ನು ಬಿಡಿಬಿಡಿಯಾಗಿ ಒಟ್ಟುಮಾಡಿದರೆ ತಿಳಿಯಲಾಗದ ಮಾನವೀಯ ಅನುಭವದ ಒಳಗೆ ಸಂಕೀರ್ಣವಾದ ರೀತಿಗಳಲ್ಲಿ ಒಂದನ್ನೊಂದು ಪ್ರಭಾವಿಸುವಂಥವುಗಳು ಇವು. ಆದರೆ ಈ ಸಾಮರ್ಥ್ಯಗಳೊಂದಿಗೆ ಯಾವುದನ್ನು ನಮ್ಮ ಸಾಮರ್ಥ್ಯದಿಂದ ಸಂತೃಪ್ತಿಗೊಳಿಸಬಹುದೋ, ಮಾನವ ಜೀವನವನ್ನು ಸಂಸ್ಥಾಪಿತಗೊಳಿಸಬಹುದೋ ಅಂಥ, ವಿಸ್ತಾರವಾದ ವ್ಯಾಪ್ತಿಯುಳ್ಳ ಸಹಜವಾದ - ದೈಹಿಕ, ಮಾನಸಿಕ ಮತ್ತು ಸಾಮಾಜಿಕ - ಬೇಡಿಕೆಗಳು ಮತ್ತು ಬಯಕೆಗಳನ್ನು ನಾವು ಹೊಂದಿದ್ದೇವೆ. ನೈತಿಕ ಜೀವನವು, ಈ ಎಲ್ಲವೂ ಪ್ರಾಪ್ತವಾಗಿರುವಂತೆಯೇ, ಎಲ್ಲರನ್ನೂ ಒಂದು ಅಸ್ಪಷ್ಟ ಆದರ್ಶೀಕೃತ ಸೈದ್ಧಾಂತಿಕ ತತ್ತ್ವಗಳ ಸಂಕಲನದ ಅಡಿಯಲ್ಲಿ ತರುವ ಸಂತೃಪ್ತಿಗಳಲ್ಲಿ ಸರಳವಾಗಿ ಸಾಧಿಸಲ್ಪಡುವಂಥದ್ದು ಎಂಬಂತೆ ಒಪ್ಪಿಕೊಳ್ಳುವುದಾದರೆ ಅದು ನಿಜವಾಗಿ ಒಂದು ವಿವೇಚನಾವಾದದ ಮಿಥ್ಯೆಯ ಅನುಸರಣೆ ಎಂದಾಗುತ್ತದೆ. ನೈತಿಕ ಜೀವನವು, ಉತ್ತಮ ಜೀವನವಾಗಿ, ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಮಾನವ ಕೃತಕೃತ್ಯತೆಯ ಸಾಧನೆಯನ್ನು ಕುರಿತಾದದ್ದಾಗಿದೆ. ಇದರಲ್ಲಿ, ವಿವೇಚನೆಯು ಒಂದು ಮುಖ್ಯ ಪಾತ್ರ ವಹಿಸಬೇಕು, ಆದರೆ ಅದರ ಬೆಂಬತ್ತುವಿಕೆ ಮತ್ತು ಈಡೇರಿಕೆಗಳು ವಿಷಯಗಳ ಆರಂಭವೂ ಅಲ್ಲ, ಅಂತ್ಯವೂ ಅಲ್ಲ.

ಹೀಗೆ ನೈತಿಕ ಶಿಕ್ಷಣವನ್ನು ಇತರ ಎಲ್ಲವುಗಳಿಗಿಂತ ಮೇಲಾದ ಒಂದು ಅರಿವಿನ ಅಭಿವೃದ್ಧಿಯ ಪ್ರಕಾರವೆಂದು ತಿಳಿಯುವುದೆಂದರೆ; ಆ ವ್ಯವಹಾರದ ಮೂಲಭೂತ ತಾರ್ಕಿಕಾಧಾರವನ್ನು, ಅದರ ಅಸ್ತಿತ್ವದ ವಿವೇಚನೆಯನ್ನೇ(*ರೈಸನ್ ಡಿ'ಎಟ್ರೆ*) ತಪ್ಪಾಗಿ ಅರ್ಥೈಸುವುದರಮೂಲಕ, ತಪ್ಪು ತಿಳಿದಂತಾಗುತ್ತದೆ. ಇದು ನೈತಿಕ ಶಿಕ್ಷಣದಲ್ಲಿ ನೈತಿಕ ವಿವೇಚನಾಶೀಲತೆಯ ಸಾಮರ್ಥ್ಯಗಳ ಅಭಿವೃದ್ಧಿಪಡಿಸುವಿಕೆಯ ಸ್ಥಾನವನ್ನು ಅಲ್ಲಗಳೆಯುವುದಲ್ಲ,

ಆದರೆ ಅಂಥ ದೃಷ್ಟಿಕೋನವು ಇಡಿಯಾಗಿ ನೈತಿಕ ಶಿಕ್ಷಣದ ಅತ್ಯಂತ ನಿಗದಿತ ಲಕ್ಷಣವಾಗಿರುವ ಒಂದು ಅತ್ಯಂತ ವಿಭಿನ್ನವಾದ ಮತ್ತು ಅತ್ಯಂತ ವ್ಯಾಪಕವಾದ ಬೆಂಬತ್ತುವಿಕೆಯ ಸೀಮೆಯೊಳಗೆ ಈ ವಿವೇಚನಾಶೀಲತೆಯ ಲಕ್ಷಣ ಮತ್ತು ಗುರಿಗಳ ಪುನಃಪರಿಗಣನೆಯನ್ನು ಅಪೇಕ್ಷಿಸುತ್ತದೆ.

## ವೈಯಕ್ತಿಕ ಕೃತಕೃತ್ಯತೆಯಾಗಿ ನೈತಿಕ ಶಿಕ್ಷಣ

ನೈತಿಕ ಶಿಕ್ಷಣದ ಬಗ್ಗೆ ನಾನು ಅತಿ ಸಂಕ್ಷಿಪ್ತವಾಗಿ ವಿವರಿಸಿರುವ ಈ ಸಂಕುಚಿತ ಹಾಗೂ ವಿಕೃತ ವಿವೇಚನಾವಾದದ ದೃಷ್ಟಿಕೋನಕ್ಕಿಂತ ಭಿನ್ನವಾಗಿ, ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಭರವಸೆ ಮೂಡಿಸುವ ಒಂದು ದೃಷ್ಟಿಕೋನವು ಸಹಜವಾಗಿ ಪ್ರಾಪ್ತವಾದ ಮಾನವ ಬೇಡಿಕೆಗಳು ಮತ್ತು ಬಯಕೆಗಳಿಗೆ ಪೂರ್ಣ ನ್ಯಾಯ ಒದಗಿಸಲು ಪ್ರಯತ್ತಿಸಿದೆ. ಇದರಲ್ಲಿ ನೈತಿಕ ಜೀವನವು ಮಾನವ ಸಂತೃಪ್ತಿಗಳನ್ನು, ಅವುಗಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಲಕ್ಷಣ ವೈವಿಧ್ಯವನ್ನು ನಿರ್ಭಿಡೆಯಿಂದ ಒಪ್ಪಿಕೊಂಡು, ಪರಮಾವಧಿಗೆ ಏರಿಸುವಂಥದ್ದಾಗಿ ನೋಡಲ್ಪಟ್ಟಿದೆ. ಈ ಪರಿಭಾಷೆಗಳಲ್ಲಿ ನಮ್ಮ ಅರಿಯುವ ಸಾಮರ್ಥ್ಯಗಳು ಮಾನವ ಕೃತಕೃತ್ಯತೆಯನ್ನು ಸಂಘಟಿಸುವ ರೀತಿಗಳಲ್ಲಿ ಈ ಸಂತೃಪ್ತಿಗಳನ್ನು ಬೆಂಬತ್ತಲು ನಮಗಿರುವ ಉಪಾಯಗಳ ಅನಿವಾರ್ಯ ಘಟಕವೆಂಬಂತೆ ತಿಳಿಯಲ್ಪಡಬೇಕು. ನಮ್ಮ ಬೇಡಿಕೆಗಳು ಮತ್ತು ಬಯಕೆಗಳನ್ನು ಹಾಗೂ ಆಧುನಿಕ ಪ್ರಪಂಚದಲ್ಲಿ ಇವು ಮತ್ತು ಇವುಗಳ ಸಂತೃಪ್ತಿಗಳು ಪಡೆಯುವ ವಿವಿಧ ಸ್ವರೂಪಗಳನ್ನು ಇನ್ನಷ್ಟು ಪೂರ್ಣವಾಗಿ ತಿಳಿಯುತ್ತಾ, ನಾವು ಹುಡುಕುವ ಗುರಿಗಳಿಗಾಗಿ ಇನ್ನಷ್ಟು ಪರಿಣಾಮಕಾರಿಯಾದ ಉಪಾಯಗಳನ್ನು ಕೈಗೆತ್ತಿಕೊಳ್ಳಬಲ್ಲೆವು ಹಾಗೂ ಜೀವನದ ಇನ್ನಷ್ಟು ತೃಪ್ತಿದಾಯಕವಾದ ಮತ್ತು ಮತ್ತಷ್ಟು ಸುಸಂಬದ್ಧವಾದ ಹೊಂದಾಣಿಸಿದ ಪ್ರಕಾರಗಳನ್ನು ಬೆಳೆಸಿಕೊಳ್ಳಬಲ್ಲೆವು. ವಿವೇಚನೆ, ಜ್ಞಾನ ಮತ್ತು ತಿಳುವಳಿಕೆಗಳು; ನಮ್ಮ ಗರಿಷ್ಠ ಒಳಿತನ್ನು ಸಂಸ್ಥಾಪಿಸುವ ಜೀವನದ ಸ್ವರೂಪವನ್ನಷ್ಟೇ ಅಲ್ಲದೆ, - ವೈಯಕ್ತಿಕ ಮತ್ತು ಸಾಮಾಜಿಕ- ಸಂಬಂಧಗಳ ಅವಶ್ಯಕ ಸಾಧಕಗಳೆಂದು ತಿಳಿಯಲ್ಪಟ್ಟಿವೆ. ಆದರೆ ವೈಯಕ್ತಿಕ ಬೇಡಿಕೆಗಳು ಮತ್ತು ಸಾಮರ್ಥ್ಯಗಳು ಅನೇಕ ವಿವರಗಳಲ್ಲಿ ವಿಭಿನ್ನವಾಗಿವೆ ಮತ್ತು ಬೇಡಿಕೆಗಳು ಹಾಗೂ ಸಂತೃಪ್ತಿಗಳ ಸೂಕ್ಷ್ಮಾಭಿರುಚಿಯ ಇನ್ನಷ್ಟು ಹೆಚ್ಚಿನ ವ್ಯತ್ಯಾಸಗಳು ನಮಗೆ ಮುಕ್ತವಾಗಿವೆಯೆಂದರೆ ನಮ್ಮಲ್ಲಿ ಪ್ರತಿಯೊಬ್ಬರ ಉತ್ತಮ ಜೀವನವು ವೈಯಕ್ತಿಕವಾಗಿ ಇತ್ಯರ್ಥಗೊಳಿಸಲ್ಪಡಬೇಕು ಮತ್ತು ನಿರ್ಮಿಸಲ್ಪಡಬೇಕು ಎಂದು ಅರ್ಥ. ಆಗ, ಉತ್ತಮ ಜೀವನದ ಅಂತರಾಳದಲ್ಲಿ ಸ್ವಕೀಯ ಜ್ಞಾನ, ಸ್ವಂತ ಆಯ್ಕೆ ಮತ್ತು ಸ್ವನಿರ್ದೇಶನವು ಇರತಕ್ಕದ್ದು. ಆದರೆ ನಮ್ಮಲ್ಲಿ ಯಾರಿಗೇ ಆದರೂ ಉತ್ತಮ ಜೀವನವನ್ನು ಸಾಧಿಸಿಕೊಳ್ಳಬೇಕೆಂದರೆ ಈ ರೀತಿ ನಿರ್ಮಿಸಲ್ಪಟ್ಟ ನಿರ್ಧಾರಗಳು ಮತ್ತು ಕ್ರಿಯೆಗಳ ಒಂದು ವೈಯಕ್ತಿಕ ಹಾಗೂ ಸಾಮಾಜಿಕ ಸಾಮರಸ್ಯವು ಸ್ಪಷ್ಟವಾಗಿ ಮಹತ್ತ್ವದ್ದಾಗುತ್ತದೆ. ಕೆಲವು ಕನಿಷ್ಠ ಸಾಮಾಜಿಕ ನಿಯಮ ಹಾಗೂ ತತ್ತ್ವಗಳು ಅನುಭವಾಧಾರಿತವಾಗಿ ನಿರ್ಧರಿಸಲ್ಪಡಬೇಕಾಗುತ್ತವೆ. ಆದರೆ ಇವಕ್ಕೂ ಕೂಡ ಅತ್ಯಂತ ಮೂಲಭೂತವಾದೊಂದು ಅಂಶದ ಅಗತ್ಯವಿದೆ. ನಮ್ಮ ಸಮಾಜದಲ್ಲಿ ಎಲ್ಲರಿಗೂ ಉತ್ತಮ ಜೀವನಕ್ಕೆ ಅವಶ್ಯಕವಾದ ನಿರ್ದಿಷ್ಟ ಸಾರ್ವತ್ರಿಕ, ಸರ್ವಶೀರ್ಷಕವಾದ ವೈಯಕ್ತಿಕ ಮತ್ತು ಸಾಮಾಜಿಕ ಸದ್ಗುಣಗಳ ಒಂದು ಚೌಕಟ್ಟು ಅದು. ಅಂಥ, ಔದಾರ್ಯ, ಸಜ್ಜನಿಕೆ ಮತ್ತು ಸತ್ಯಶೀಲತೆಯಂಥ ಸದ್ಗುಣಗಳು ಅಥವಾ ಚಾರಿತ್ರ್ಯದ ವಿನ್ಯಾಸಗಳು ನಾವು ಪ್ರತಿಯೊಬ್ಬರೂ

ವೈಯಕ್ತಿಕವಾಗಿ ಒಳ್ಳೆಯ ಜೀವನವನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗುವ ಸಂರಚನೆಯನ್ನು ಒದಗಿಸುವುವೆಂದು ಕಂಡುಬಂದಿವೆ. ಅಂಥ ಚೌಕಟ್ಟು ನಾವು ವೈಯಕ್ತಿಕವಾಗಿ ನಮ್ಮ ಅತ್ಯುತ್ಕೃಷ್ಟ ಒಳಿತನ್ನು ಕಾಣಲಾಗುವ ಜೀವನದ ನಮೂನೆಗಳ ಮಧ್ಯೆ ಆಯ್ಕೆಮಾಡಿಕೊಳ್ಳುವಲ್ಲಿ ನಿಷ್ಪಕ್ಷಪಾತಿಯಾಗಿರುತ್ತದೆ ಎಂದು ಸಮರ್ಥಿಸಲಾಗಿದೆ.

ಈ ಮಾತುಗಳಲ್ಲಿ ನೈತಿಕ ಶಿಕ್ಷಣವು (ಉತ್ತಮ ಜೀವನಕ್ಕಾಗಿ ಶಿಕ್ಷಣವೆಂಬುದಾಗಿ) ತನ್ನನ್ನು ಕುರಿತ ವಿಶಾಲ ವ್ಯಾಪ್ತಿಯ ಜ್ಞಾನದ ಬಗ್ಗೆ, ನೈಸರ್ಗಿಕ ಹಾಗೂ ಸಾಮಾಜಿಕ ಪರಿಸರದ ಬಗ್ಗೆ, ಬೇಡಿಕೆಗಳು ಮತ್ತು ಬಯಕೆಗಳ ಈಡೇರಿಕೆಗೆ ಲಭ್ಯವಾದ ಚಟುವಟಿಕೆಗಳು ಮತ್ತು ಅಭ್ಯಾಸಗಳ ಬಗ್ಗೆ ಹಾಗೂ ಜೀವನದ ಹೊಂದಾಣಿಸಿದ ಮಾರ್ಗೋಪಾಯಗಳ ಬಗ್ಗೆ ಅರಿವನ್ನು ಅಪೇಕ್ಷಿಸುತ್ತದೆ. ತನ್ನ ಪರಿಗಣಿತ ಬೇಡಿಕೆಗಳು ಮತ್ತು ಅವುಗಳ ಸಂತೃಪ್ತಿಯನ್ನು ನಿಜವಾಗಿ ಸಾಧಿಸಲು ಬೇಕಾದ ಪ್ರಾಯೋಗಿಕ ಉಪಾಯಗಳಿಗೆ ಸಂಬಂಧಿಸಿದಂತೆ ತಿಳುವಳಿಕೆಯುಳ್ಳ ವಿವೇಚನಾತ್ಮಕ ನಿರ್ಣಯಗಳನ್ನು ಮಾಡಲು ಬೇಕಾದ ಕೌಶಲಗಳನ್ನೂ ಅದು ಅಪೇಕ್ಷಿಸುತ್ತದೆ. ಆದರೆ ಎಲ್ಲಕ್ಕಿಂತ ಹೆಚ್ಚಾಗಿ, ನೈತಿಕ ಶಿಕ್ಷಣವು ವೈಯಕ್ತಿಕ ಕೃತಕೃತ್ಯತೆಗೆ ಅತಿ ಮುಖ್ಯವಾದ ಸದ್ಗುಣಗಳ ಅಭಿವೃದ್ಧಿಯನ್ನು ಅಪೇಕ್ಷಿಸುತ್ತದೆ. ಚಾರಿತ್ರ್ಯದ ಶಿಕ್ಷಣವು ಮಾತ್ರ ಒಳ್ಳೆಯ ಜೀವನವನ್ನು ಸಾಧ್ಯವಾಗಿಸುತ್ತದೆ.

## ವಿವೇಚನಾತ್ಮಕ ಅಭ್ಯಾಸದ ಅಭಿವೃದ್ಧಿ

ಈ ಎರಡನೆಯ ದೃಷ್ಟಿಕೋನವು ವಿವೇಚನಾವಾದದ ಪ್ರಸ್ತಾವನೆಯಲ್ಲಿರುವ ನಿಗದಿಯಾದ ಮೂಲಭೂತ ನ್ಯೂನತೆಗಳೇನಿವೆಯೋ ಅವುಗಳಲ್ಲಿ ಹಲವನ್ನು ನಿವಾರಿಸಲು ನಿಶ್ಚಿತವಾಗಿ ಹೆಚ್ಚಿನ ಕೆಲಸವನ್ನು ನಿರ್ವಹಿಸುತ್ತದೆ. ಆದರೆ ಅದು ಮಾನವ ಸ್ವಭಾವದ ಲೆಕ್ಕಾಚಾರದಲ್ಲಿ ಮತ್ತು ಅದರಿಂದಾಗಿ ಈ ಇಡೀ ವ್ಯವಹಾರದ ಮೂಲ ನಕ್ಷೆಯನ್ನು ತಯಾರಿಸುವುದರಲ್ಲಿ ಇನ್ನೂ ಅಸಮರ್ಪಕವಾಗಿಯೇ ಇದೆಯೆಂದು ನನಗೆ ಅನ್ನಿಸುತ್ತದೆ. ಆದ್ದರಿಂದ ಈ ದೌರ್ಬಲ್ಯಗಳನ್ನು ಬೆಂಬತ್ತುವಾಗ ನಾನು ಮೊದಲಿನ ಎರಡು ಪ್ರಸ್ತಾವನೆಗಳ ಸಾಮರ್ಥ್ಯಾಂಶಗಳನ್ನು ಬಿಡದೆ ಗಮನಕ್ಕೆ ತೆಗೆದುಕೊಳ್ಳುವ ಮೂರನೆಯದಾದ ಒಂದು ಪ್ರಸ್ತಾವನೆಯನ್ನು ಸೂಚಿಸುತ್ತೇನೆ.

ಆರಂಭದಲ್ಲಿ, ವಿವೇಚನೆಯು ಮಾತ್ರ ನೈತಿಕ ಜೀವನವನ್ನು ನಿರ್ಧರಿಸಲು (ಮತ್ತು ನಿಜವಾಗಿ ಕೊನೆಯಲ್ಲಿ ಪ್ರೇರಿಸಲೂ ಸಹ) ಸಾಮರ್ಥ್ಯ ಹೊಂದಿದೆ ಎಂಬ ವಿವೇಚನಾವಾದಿ ವಿಚಾರವನ್ನು ತಿರಸ್ಕರಿಸುವಲ್ಲಿ, ಎರಡನೆಯ ದೃಷ್ಟಿಕೋನವು ಮತ್ತೊಂದು ದಿಕ್ಕಿನಲ್ಲಿ ಸ್ವಲ್ಪ ಹೆಚ್ಚು ದೂರಕ್ಕೆ ಕ್ರಮಿಸುತ್ತದೆಂಬಂತೆ ನನಗೆ ತೋರುತ್ತದೆ. ವಿವೇಚನಾತ್ಮಕವಾಗಿ ಶಿಸ್ತುಬದ್ಧವಾದ ಜೀವನವು ತಾನೇ, ನಾವು ಸಹಜವಾಗಿ ಬೆಂಬತ್ತುವ ಒಂದು ಪ್ರಬಲವಾದ ಸಂತೃಪ್ತಿಯಾಗಿರುವಾಗ ವಿವೇಚನೆಯು ಬೇರೆಯೇ ಬೇಡಿಕೆ ಮತ್ತು ಬಯಕೆಗಳ ಸಂತೃಪ್ತಿಯನ್ನು ಪೋಷಿಸುವಲ್ಲಿ ಒಂದು ಸಾಧನಮಾತ್ರವಾಗಿದೆಯೆಂದು ಕಾಣುವುದು ತಪ್ಪೆಂದು ನಾನು ಭಾವಿಸುತ್ತೇನೆ. ನೈತಿಕತೆಯೆಂಬುದು ಭಾಗಶಃ ನಿಶ್ಚಿತವಾಗಿ ವೈಯಕ್ತಿಕ ಹಾಗೂ ಸಾಮಾಜಿಕ ಸಂತೃಪ್ತಿಯ ಇತರ ಅನೇಕ ಬಯಕೆಗಳಿಂದ ಮತ್ತು ನಾವೇನು ಯೋಚಿಸುವೆವೋ ಮತ್ತು ಮಾಡುವೆವೋ ಅದರಲ್ಲಿ ವಿವೇಚನಾಶೀಲರಾಗಿರಬೇಕೆಂಬ ಬಯಕೆಯಿಂದಲೇ ಚಾಲಿತವಾಗಿದೆ.

ಆದ್ದರಿಂದ ವಿವೇಚನೆಯ ಈ ಕಸರತ್ತು ಭಾಗಶಃ ನೈತಿಕ ಜೀವನದ ಘಟಕವೇ ಆಗಿರುವುದರಿಂದ, ಅದು ಅವಶ್ಯಕವಾದ ಹಾಗೂ ನೈತಿಕ ಶಿಕ್ಷಣದ ಗುರಿಗಳಲ್ಲಿ ಒಂದಾದ ಸಾಧಕಾಂಶ ಮಾತ್ರವಷ್ಟೇ ಆಗಿರದೆ,. ಸಹಜವಾದ ಬಯಕೆಯಾಗಿದ್ದು, ವಿವೇಚನೆಯ ಕಸರತ್ತು ನೈತಿಕ ಜೀವನದಲ್ಲಿ ಹಾಗೂ ನೈತಿಕ ಶಿಕ್ಷಣದಲ್ಲಿ ಒಂದು ಮುಖ್ಯವಾದ ಪ್ರೇರಕ ಶಕ್ತಿಯಾಗಿದೆ.

ಆದರೆ, ಈ ಎರಡನೆಯ ಪ್ರಸ್ತಾವನೆಯು ನಮ್ಮಲ್ಲೇ ಪ್ರಾಪ್ತವಾದ ಬೇಡಿಕೆಗಳು ಮತ್ತು ಬಯಕೆಗಳನ್ನು ಪೂರೈಸಲು ಸರಳವಾಗಿ ಸಿಗುವ ಸಾಧನೆಗಳನ್ನು ಹೊಂದಿರುವ ಒಂದು ಅನಾಸಕ್ತ, ಪ್ರೇಕ್ಷಕ ಪ್ರವೃತ್ತಿಯ, ಸೈದ್ಧಾಂತಿಕ ವ್ಯವಹಾರವಾಗಿ ವಿವೇಚನಾವಾದಿ ದೃಷ್ಟಿಕೋನದ ಜೊತೆಯಲ್ಲಿ ನಂತರವೂ ಉಳಿದುಕೊಳ್ಳುವಂತೆ ತೋರುತ್ತದೆ. ನಿಜವಾಗಿ, ನಾನು ಮೊದಲು ಸೂಚಿಸಿದಂತೆ, ನಮಗೆ ಸಹಜವಾಗಿ ಪ್ರಾಪ್ತವಾದ ಅರಿಯುವ ಸಾಮರ್ಥ್ಯಗಳು ಆರಂಭದಿಂದಲೂ ಬೇಡಿಕೆಗಳು ಮತ್ತು ಬಯಕೆಗಳ ಸಂತೃಪ್ತಿಯ ವಿಸ್ತೃತ ವ್ಯಾಪ್ತಿಯ ಬೆಂಬತ್ತುವಿಕೆಗೆ ಕಟ್ಟುಬಿದ್ದಿವೆ ಹಾಗೂ ನಮ್ಮ ಭಾವನೆ ಮತ್ತು ವರ್ತನೆಯ ಇತರ ಪ್ರಾಪ್ತ ಸಾಮರ್ಥ್ಯಗಳ ಬಳಕೆಯೊಂದಿಗೆ ಬಿಡದಂತೆ ಸಂಬದ್ಧವಾಗಿವೆ. ವಿವೇಚನೆಯು ನಮ್ಮ ಅಭಿರುಚಿಗಳ ಬೆಂಬತ್ತುವಿಕೆಯ ಅವಿಭಾಜ್ಯ ಅಂಗವಾಗಿರುವುದರಿಂದ, ತನ್ನ ಸ್ವಭಾವದಲ್ಲಿ, ಪ್ರಾಥಮಿಕವಾಗಿ ಒಂದು ವ್ಯವಹಾರ್ಯ ಸಂಗತಿ ಎಂದು ಅದನ್ನು ಗುರುತಿಸುವುದರೊಂದಿಗೆ ಸದರಿ ಪ್ರಕ್ರಿಯೆಯನ್ನು ನಾವು ಆರಂಭಿಸಬೇಕೆಂದು ಭಾವಿಸುತ್ತೇನೆ. ಅದು ಹಾಗಿರುವಾಗ, ನಾವು ಸಿದ್ಧಪಡಿಸುವ ಮೊದಲನೆಯ ಪರಿಕಲ್ಪನೆಗಳು ನಮಗೆ ಸಂತೋಷವನ್ನು, ನೋವನ್ನು ಅಥವಾ ಇತರ ತೃಪ್ತ ಅತೃಪ್ತ ಸ್ಥಿತಿಗಳನ್ನು ಕೊಡುವ ವಸ್ತುಗಳು ಮತ್ತು ಘಟನೆಗಳನ್ನು ಗುರುತಿಸುವ ವೈಶಿಷ್ಟ್ಯಗಳ ಬಗ್ಗೆ ಕಾಳಜಿ ಹೊಂದಿವೆಯೆಂಬುದರಲ್ಲಿ ಆಶ್ಚರ್ಯವಿಲ್ಲ. ಅಂಥದ್ದೇ ಚಟುವಟಿಕೆಗಳಲ್ಲಿ, ಮೊದಲಿಗೆ ನಾವು ಅಂಥ ಸ್ಥಿತಿಗಳಿಗೆ ದಾರಿಮಾಡಿಕೊಡುವಂಥವುಗಳನ್ನು ವಿವೇಚಿಸುತ್ತೇವೆ ಹಾಗೂ ಬಯಸಿದ ಗುರಿಗಳಿಗೆ ಸರಳವಾದ ವಿಧಾನಗಳನ್ನು ಹೊಂದುವುದು ಹೇಗೆಂಬುದನ್ನು ಕಲಿಯುತ್ತೇವೆ. ಆದರೆ ಈ ರೀತಿ ಅಭಿವೃದ್ಧಿಪಡಿಸಿದ ತಿಳುವಳಿಕೆಯು ಪ್ರಾಥಮಿಕವಾಗಿ ಸೈದ್ಧಾಂತಿಕವಾದದ್ದಾಗಲೀ ಅಥವಾ '*ಅದನ್ನು ತಿಳಿ*' ಎಂಬಂಥದ್ದಾಗಲೀ ಅಲ್ಲ. ಅದಕ್ಕಿಂತ ಹೆಚ್ಚಾಗಿ, ಅದು ಕ್ರಿಯೆಯಲ್ಲಿನ ಕೌಶಲ ಮತ್ತು ನಿರ್ಣಯದ '*ಹೇಗೆಂದು ತಿಳಿ*' ಎಂಬಂಥಾ, ಪರಿಕಲ್ಪನೆಯೊಂದಿಗೆ ಪ್ರಜ್ಞಾಪೂರ್ವಕವಾಗಿ ಸ್ಪಷ್ಟ ಮಾತುಗಳಲ್ಲಿ ಹೇಳುವ ವಿಷಯ. ವಸ್ತುಗಳು ಮೊದಲಿಗೆ ಧಾರಣಾತ್ಮಕವಾಗಿ ಗುರುತಿಸಲ್ಪಡುವುದು, ನಮ್ಮ ಬೇಡಿಕೆಗಳಿಗೆ ಸಂಬಂಧಿಸಿದ ಅವುಗಳ ಕಾರ್ಯರೂಪದ ಮಹತ್ತ್ವಕ್ಕಾಗಿಯೇ ಹೊರತು ಕೇವಲ ಅವುಗಳ ಗಮನೀಯವಾದ ಗುಣಲಕ್ಷಣಗಳಿಗಾಗಿ ಅಲ್ಲ. ಪ್ರತಿಪಾದನೆಗಳ ವಿಷಯಕ್ಕೆ ಬಂದಾಗ, ವಿವೇಚನೆಯ ಪ್ರಾಥಮಿಕ ಪ್ರತಿಪಾದನೆಗಳೆಂದರೆ; ತೃಪ್ತಿ ಅಥವಾ ಅತೃಪ್ತಿಯನ್ನು ಉಂಟುಮಾಡುವ ವಾಸ್ತವಿಕ ಸನ್ನಿವೇಶಗಳಿಗೆ ಗಮನಕೊಡುವ ಸಂಗತಿಗಳ ವಸ್ತುನಿಷ್ಠ ಸ್ಥಿತಿಗಳ ಬಗ್ಗೆ ಅನಾಸಕ್ತ ಸತ್ಯಾಂಶಗಳಾಗಿರದ ಸಾಮಾನ್ಯೀಕರಣಗಳು ಎಂದು ನಾನು ಸೂಚಿಸುತ್ತೇನೆ. ಹೆಚ್ಚೇನು, ಆಚರಣೆಯ ಸೀಮೆಯೊಳಗೆ ಇರುವ ಅಂಥ ವಿವೇಚನಾತ್ಮಕ ಸ್ಪಷ್ಟೋಕ್ತಿಯು ವಿವಿಧ ಪ್ರಾಯೋಗಿಕ ಸನ್ನಿವೇಶಗಳಲ್ಲಿ ಮಾರ್ಪಡುವ ಎಲ್ಲಾ ಅವ್ಯಕ್ತ, ಸೂಚಿತ ಅಂಶಗಳಿಂದ ಸಾರಗೊಳ್ಳುವ ಪರಿಕಲ್ಪನೆಗಳಿಂದ ಅವಶ್ಯವಾಗಿ ಸಾಧಿಸಲ್ಪಡುತ್ತದೆಂಬುದನ್ನು ನಾವು ಒಪ್ಪತಕ್ಕದ್ದು. ಹೆಚ್ಚೆಂದರೆ ಅದು, ತನ್ನ ಪರಿಕಲ್ಪನೆಗಳು ವಿಶಿಷ್ಟವಾದ ಮತ್ತು ನಿರ್ದಿಷ್ಟವಾದ ಪರಿಗಣನೆಗಳನ್ನು ಕಳಚಿಹಾಕುತ್ತಿರುವಾಗ, ಅಂಥ ಸನ್ನಿವೇಶಗಳ ಪರಿಮಿತವಾದ

ಸಾಮಾನ್ಯಾಂಶಗಳನ್ನು ಗ್ರಹಿಸಬಲ್ಲುದು. ಈ ದೃಷ್ಟಿಕೋನದ ಪ್ರಕಾರ, ವಿವೇಚನೆಯು ಪ್ರಾಥಮಿಕವಾಗಿ ತನ್ನ ಲಕ್ಷಣದಲ್ಲಿ ಕ್ರಿಯಾತ್ಮಕವಾಗಿದ್ದು; ಯಶಸ್ವೀ ಕಾರ್ಯಾಚರಣೆಯನ್ನನುಸರಿಸಿ ಮಾತ್ರವೇ ಒಪ್ಪಬಹುದಾದ ಪ್ರತಿಪಾದನೀಯ ಜ್ಞಾನವು, ಮೊದಲಿಗೆ ಆಚರಣೆಗೆ ಬೇಕಾದ ಸಾಮಾನ್ಯ ನಿಯಮಗಳಲ್ಲಿ, ಅವು ತಮ್ಮ ಪ್ರಾಥಮ್ಯದಲ್ಲಿ ಪರಿಮಿತ ಹಾಗೂ ಪಕ್ಷಪಾತಿಯಾಗಿದ್ದರೂ ಸಹ ರೂಪುಗೊಳ್ಳುತ್ತದೆ.

ಆದಾಗ್ಯೂ, ವಾಸ್ತವಿಕ ವಿವೇಚನೆಯ ಈ ಕಸರತ್ತು, ತಕ್ಕ ಸಮಯದಲ್ಲಿ ಸೈದ್ಧಾಂತಿಕ ವಿವೇಚನೆಯಿಂದ ಸ್ಥಾನಪಲ್ಲಟವನ್ನು ಬಯಸುವ ಒಂದು ಆರಂಭಿಕ ಅಪರಿಪಕ್ವ ಚಟುವಟಿಕೆಯೇನಲ್ಲ. ವಿವೇಚನಾತ್ಮಕ ಅಭ್ಯಾಸದ ಈ ಅಭಿವೃದ್ಧಿಯು ತನ್ನ ಸ್ವಭಾವದಲ್ಲಿ ಹಂತ ಹಂತವಾಗಿ ಅಭ್ಯಾಸವನ್ನೇ ಹೆಚ್ಚು ಯಶಸ್ವಿಯಾಗಿಸುವ ಸಂಗತಿಯಾಗಿದ್ದು, ವೈಯಕ್ತಿಕವಾಗ ಹಾಗೂ ಸಾಮೂಹಿಕವಾಗಿ ಕಾರ್ಯಾಚರಣೆಗೊಳಿಸುವ ಮೂಲಕವಷ್ಟೇ ಅದನ್ನು ಸಾಧಿಸಬಹುದಾಗಿದೆ. ಅಸ್ಪಷ್ಟವಾದ ಪರಿಕಲ್ಪನೀಕರಣವು ಎಷ್ಟೇ ಇದ್ದರೂ ತನ್ನಿಂತಾನೇ ನಮಗೆ ವಿವೇಚನಾತ್ಮಕ ಅಭ್ಯಾಸಕ್ಕೆ ಸಾಕಷ್ಟು ಆಧಾರವನ್ನು ನೀಡಲಾರದು. ವಾಸ್ತವ ಪ್ರಯೋಗದಲ್ಲಿ ಮಾತ್ರ ನಾವು ವೈಯಕ್ತಿಕವಾಗಿ ಸಂತೃಪ್ತಿಯ ಹೊಸ ಪ್ರಕಾರಗಳು ಮತ್ತು ನಮೂನೆಗಳನ್ನು ಹಾಗೂ ಗುರಿಗಳಿಗೆ ಹೆಚ್ಚು ಪರಿಣಾಮಕಾರಿಯಾದ ಉಪಾಯಗಳನ್ನು ಆವಿಷ್ಕರಿಸುತ್ತೇವೆ. ಆದರೂ ಯಾವಾಗಲೂ ಹೆಚ್ಚು ಯಶಸ್ವಿಯಾದ ಅಭ್ಯಾಸಗಳ ಸುಸ್ಥಿರವಾದ ಅಭಿವೃದ್ಧಿಯು ಅಭ್ಯಾಸಕ್ಕೆ ಅಂತರ್ಗತವಾಗಿಯೇ ಪರಿಕಲ್ಪನಾತ್ಮಕ ಸೂತ್ರಗಳ ನಿರ್ಮಾಣ ಮತ್ತು ಬಳಕೆಯನ್ನು ಅಪೇಕ್ಷಿಸುತ್ತದೆ, ಅಂತಹ ಅಭ್ಯಾಸದ ಅಭಿವೃದ್ಧಿಯು ಸಾಕಷ್ಟು ಪರಿಕಲ್ಪನೆಗಳ ಸಾಧನೆಯ ಮಟ್ಟವನ್ನು ಅವಲಂಬಿಸಿ ವ್ಯವಸ್ಥಿತವಾಗಿ ಹಾಗೂ ಕ್ರಮಬದ್ಧವಾಗಿ ಇರಬಲ್ಲದು. ಸಾಮಾಜಿಕ ಸಹಕಾರದಲ್ಲಿ ಹಾಗೂ ವಾಸ್ತವಿಕ ವಿವೇಚನೆಯ ಪಾಲ್ಗೊಳ್ಳುವಿಕೆಯುಳ್ಳ, ಸಾರ್ವಜನಿಕ ಭಾಷೆಯಲ್ಲಿ ಪಾಲ್ಗೊಳ್ಳುವಿಕೆಯುಳ್ಳ ಪರಿಕಲ್ಪನಾತ್ಮಕ ಸೂತ್ರಗಳಲ್ಲಿ ಮಾತ್ರ ಎಂದೆಂದಿಗೂ ಹೆಚ್ಚು ಯಶಸ್ವಿಯಾದ ಕೃತಕೃತ್ಯತೆಯ ಪ್ರಕಾರಗಳು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಸಾಧಿಸಲಾಗುತ್ತವೆ. ಹೀಗಿರುವಾಗ, ನೈತಿಕವಾಗಿ ಉತ್ತಮವೆನ್ನಬಹುದಾದ, ವೈಯಕ್ತಿಕವಾಗಿಯೂ ಸಾಮಾಜಿಕವಾಗಿಯೂ ಕೃತಕೃತ್ಯಗೊಳಿಸುವ ಜೀವನವು ಅಭ್ಯಾಸದ ಕಸರತ್ತಿನಲ್ಲೇ ಒಂದು ಚಿಂತನಾತ್ಮಕ ವಿಧಾನದಲ್ಲಿ ವಿವೇಚನಾತ್ಮಕ ಅಭ್ಯಾಸವನ್ನು ಅಭಿವೃದ್ಧಿಪಡಿಸುವುದನ್ನು ಅಪೇಕ್ಷಿಸುತ್ತದೆ ಎಂದು ನಾವು ಅಂಗೀಕರಿಸತಕ್ಕದ್ದು. ಅಂತಹ ಸಾಮಾಜಿಕವಾಗಿ ಅಭಿವೃದ್ಧಿಪಡಿಸಿದ ಅಭ್ಯಾಸಗಳಲ್ಲಿ ಮತ್ತು ಸಂಪೂರ್ಣವಾಗಿ ಆ ರೀತಿಯ ಜೀವನ ನಿರ್ವಹಣೆಯ ಮೂಲಕವೇ ಒಂದು ಉತ್ತಮ ಜೀವನವನ್ನು ಪಡೆಯಬಹುದು.

ಹಾಗಾದರೆ, ಭೌತ ಮತ್ತು ಸಾಮಾಜಿಕ ವಿಜ್ಞಾನಗಳು, ಗಣಿತ ಮತ್ತು ತತ್ತ್ವಶಾಸ್ತ್ರ, ಈ ಮೊದಲಾದವುಗಳಲ್ಲಿ ನಾವು ಇಷ್ಟೊಂದು ಬೆಲೆಕೊಡುವ ಸೈದ್ಧಾಂತಿಕ ವಿವೇಚನೆ ಮತ್ತು ಜ್ಞಾನದ ಈ ಇಡೀ ಪ್ರಪಂಚದ ಬಗ್ಗೆ ಏನೆಂದು ಹೇಳುವುದು? ಮೊದಲನೆಯದರ, ಅಂದರೆ ವಿವೇಚನಾವಾದಿ ಪ್ರಸ್ತಾವನೆಯ, ಸೈದ್ಧಾಂತಿಕ ಜ್ಞಾನವು ಮಾತ್ರ ನೈತಿಕ ಜೀವನದ ಆಧಾರವನ್ನು ಒದಗಿಸಲಾರದೆಂದು ನಾನು ಸಮರ್ಥಿಸುತ್ತಿದ್ದೇನೆ. ಎರಡನೆಯ ಪ್ರಸ್ತಾವನೆಯ ವಿರುದ್ಧ, ಸೈದ್ಧಾಂತಿಕ ವಿವೇಚನೆಯು ಅಂಥಾ ಒಂದು ಜೀವನಕ್ಕೆ ಬೇಕಾದ ಗುರಿಗಳ ಅಥವಾ ಅತ್ಯಂತ ಪರಿಣಾಮಕಾರಿಯಾದ ಉಪಾಯಗಳ ಗ್ರಹಿಕೆಯನ್ನು ಒದಗಿಸಲು ಆಶಿಸಲಾರದು ಎಂದು ನಾನೀಗ ವಾದಿಸುತ್ತಿದ್ದೇನೆ,

ಏಕೆಂದರೆ ಒಳ್ಳೆಯ ಜೀವನವು ಅಭ್ಯಾಸದಲ್ಲೇ ನಿರ್ಮಾಣಗೊಂಡ ವಿವೇಚನೆಯ ವಿಧಾನದಿಂದ ಮಾಹಿತಿ ಪಡೆದು ಕಾರ್ಯತಃ ಅಭಿವೃದ್ಧಿಯಾಗಿರತಕ್ಕದ್ದು. ಹಾಗಾದರೆ, ಅಂತಹ ಜೀವನದಲ್ಲಿ ಸೈದ್ಧಾಂತಿಕ ಜ್ಞಾನದ ಮಹತ್ತ್ವವೇನು? ನಾನು ಈಗಾಗಲೇ ಸೂಚಿಸಿರುವ ಉತ್ತರ, ನಮ್ಮ ಎಲ್ಲಾ ಬೇಡಿಕೆ ಮತ್ತು ಬಯಕೆಗಳ ಸಂತೃಪ್ತಿಯಿಂದ ವಿವೇಚನೆಯು ಯಾವಾಗ ಸಾರಗೊಳ್ಳುವುದೋ ಮತ್ತು ತನ್ನ ವಿಶಿಷ್ಟ ಸಂತೃಪ್ತಿಯನ್ನು ಹುಡುಕತೊಡಗುವುದೋ ಆಗ ಅಂತಹ ಜ್ಞಾನವು ಉತ್ಪನ್ನವಾಗುವುದೆಂದು ಗ್ರಹಿಸುವುದರಲ್ಲಿದೆ ಎಂಬುದು. ಅದು ಪರಿಕಲ್ಪನೆಗಳನ್ನು ರೂಪಿಸುವ, ಪ್ರತಿಪಾದನೀಯವಾಗಿಸುವ ಮತ್ತು ಅದಕ್ಕಾಗಿ ಇರುವ ಮತ್ತು ಇಲ್ಲದಿರುವ ಸಂಗತಿಗಳನ್ನು ಬೇರ್ಪಡಿಸುವ ವಿವೇಚನೆಯ ಸ್ವಭಾವದ್ದೇ ಆಗಿದೆ. ವಾಸ್ತವಿಕ ವಿವೇಚನೆಯಲ್ಲಿ ಸಂತೃಪ್ತಿಗಳನ್ನು ಉಂಟುಮಾಡುವಲ್ಲಿ ಇರುವ ಮತ್ತು ಇಲ್ಲದಿರುವ ಸಂಗತಿಗಳನ್ನು ಬೇರ್ಪಡಿಸಿ ನೋಡಲು ನಾವು ಹವಣಿಸುತ್ತೇವೆ. ಸೈದ್ಧಾಂತಿಕ ವಿವೇಚನೆಯಲ್ಲಿ ಅಂಥ ಅರಿವು ತನ್ನ ಬಗ್ಗೆ ತರುವ ಸಂತೃಪ್ತಿಗಾಗಿ ಇರುವ ಮತ್ತು ಇಲ್ಲದಿರುವ ಸಂಗತಿಗಳನ್ನು ಸರಳವಾಗಿ ಬೇರ್ಪಡಿಸಿ ನೋಡಲು ನಾವು ಹವಣಿಸುತ್ತೇವೆ. ಈ ಅರ್ಥದಲ್ಲಿ ಸೈದ್ಧಾಂತಿಕ ವಿವೇಚನೆಯು ಬೆಂಬತ್ತುವುದು ಪ್ರತಿಪಾದನೀಯ ಸತ್ಯಾಂಶಗಳನ್ನು ಅವುಗಳಿಗೋಸ್ಕರವೇ ಸಾಧಿಸುವುದನ್ನು ಮಾತ್ರ. ಅದನ್ನು ಸಾಧಿಸಲು, ಇತರ ಎಲ್ಲಾ ಅಭಿರುಚಿಗಳನ್ನು ಮೀರಿ ಸಾರಸಂಗ್ರಹ ಮಾಡುವಂತಹ ಪರಿಕಲ್ಪನೆಗಳು ರೂಪಿಸಲ್ಪಡಬೇಕು. ಹಾಗೆ ಮಾಡುವಲ್ಲಿ, ಹೇಗಿದ್ದರೂ, ಯಾವುದೇ ಪರಿಕಲ್ಪನೆಗಳ ಸಂಕಲನದ ಅಡಿಯಲ್ಲಿನ ನಮ್ಮ ತಿಳುವಳಿಕೆಯು ಅಭ್ಯಾಸದಿಂದ ಎರಡು ಪಟ್ಟಾಗಿ ಸಾರವತ್ತಾಗುತ್ತದೆ. ಅದು ಮೊದಲನೆಯ ಬಾರಿ ಅರಿವಿನ ಸಂತೃಪ್ತಿಗಳನ್ನು ಮಾತ್ರ ಅನ್ವೇಷಿಸುವುದರಿಂದ, ಮತ್ತೆ, ಎರಡನೆಯ ಬಾರಿ - ಅವುಗಳ ಒಳಗೇ ಪ್ರತಿಪಾದನೀಯ ಸತ್ಯಾಂಶಗಳನ್ನು ಸಾಧಿಸುವ ನಿರ್ದಿಷ್ಟ ಸಂತೃಪ್ತಿಯನ್ನು ಅಭ್ಯಾಸದಿಂದ ಅನ್ವೇಷಿಸುವಲ್ಲಿ ಸಾರವತ್ತಾಗುತ್ತದೆ. ಆದ್ದರಿಂದ ಸೈದ್ಧಾಂತಿಕ ವಿವೇಚನೆಯು ನಮ್ಮ ಅಭ್ಯಾಸಗಳ ಹಿಂದಿರುವ ಕೆಲವು ಅತ್ಯಂತ ಪರಿಮಿತ ಮತ್ತು ಭಾಗಶಃ ಅಂಶಗಳ ಬಗ್ಗೆ ಮಾತ್ರ ಕಾಳಜಿ ಹೊಂದಿರುತ್ತದೆ. ಆದರೆ ಅದರ ಕಾರಣವೊಂದರಿಂದಲೇ ನಾವು ವಿವೇಚನಾತ್ಮಕ ಅಭ್ಯಾಸದ ಅಭಿವೃದ್ಧಿಯ ಕೆಲವು ಪೂರ್ವಾಪೇಕ್ಷೆಗಳ ಬಗ್ಗೆ ಹೆಚ್ಚು ಸ್ಪಷ್ಟಗೊಳ್ಳಬಹುದು ಹಾಗೂ ಅದರಿಂದಾಗಿ ಅವಿರತವಾಗಿ ಮತ್ತು ವ್ಯವಸ್ಥಿತವಾಗಿ ಯಶಸ್ವೀ ಅಭ್ಯಾಸವನ್ನು ಬೆಂಬತ್ತುವ ಸ್ಥಿತಿಯಲ್ಲಿ ಇರಬಹುದು. ಆದ್ದರಿಂದ ಸೈದ್ಧಾಂತಿಕ ಜ್ಞಾನವು ನೈತಿಕ ಜೀವನವನ್ನು ನಿರ್ಮಿಸುವ ಅಡಿಪಾಯವಾಗಿಲ್ಲ, ಆದರೆ ನಿಜವಾಗಿ, ಬದಲಿಗೆ ನಮ್ಮ ಬೇಡಿಕೆಗಳು ಮತ್ತು ಅವುಗಳ ಸಂತೃಪ್ತಿಗಳ ತಿಳುವಳಿಕೆಯಲ್ಲಿ ಅವ್ಯಕ್ತವಾಗಿರುವ ನಮ್ಮ ಬಗೆಗಿನ ಗೃಹೀತಗಳು ಮತ್ತು ನಮ್ಮ ಸಂದರ್ಭವನ್ನು ವ್ಯಕ್ತವಾಗಿಸುವುದಕ್ಕೆ ಮತ್ತು ಊರ್ಜಿತಗೊಳಿಸುವುದಕ್ಕೆ ಎಡೆಬಿಡದೆ ಹವಣಿಸಲು ಒಂದು ಸಾಧನವಾಗಿದೆ. ಸೈದ್ಧಾಂತಿಕ ಜ್ಞಾನದ ಯಾವುದೇ ರೂಪದ ಪರಿಕಲ್ಪನೆಗಳು ವಾಸ್ತವಿಕ ಚಟುವಟಿಕೆಯ ಯಾವುದೇ ವಲಯಕ್ಕೆ ಅಥವಾ ಅಭ್ಯಾಸವನ್ನು ವಿವೇಚನಾತ್ಮಕವಾಗಿ ಕಾರ್ಯಾಚರಿಸಬಹುದಾದ ತತ್ವಗಳಿಗೆ ಸೂಕ್ತವಾದವುಗಳಲ್ಲ. ವಿವೇಚನಾತ್ಮಕ ಅಭ್ಯಾಸವು ಅನುಭವದಲ್ಲಿ ಮಾತ್ರ, ಆ ಪ್ರಕ್ರಿಯೆಯಲ್ಲಿ ತನ್ನದೇ ಪ್ರಾಯೋಗಿಕ ಪರಿಕಲ್ಪನೆಗಳನ್ನು ಉಂಟುಮಾಡಿಕೊಳ್ಳುತ್ತಾ, ಬೆಳೆಯುತ್ತದೆ. ಸೈದ್ಧಾಂತಿಕ ಜ್ಞಾನವು ಆ ಪ್ರಕ್ರಿಯೆಯಲ್ಲಿ ಸಂತೃಪ್ತಿಯ ಬೆಂಬತ್ತುವಿಕೆಯನ್ನು ಹೆಚ್ಚು ಯಶಸ್ವಿಗೊಳಿಸಬಲ್ಲ ರೀತಿಗಳಲ್ಲಿ ವ್ಯವಸ್ಥಿತಗೊಳಿಸುವಿಕೆಯೊಂದನ್ನು ಪ್ರಚೋದಿಸಬಲ್ಲುದು ಮಾತ್ರ.

ನೈತಿಕ ಶಿಕ್ಷಣವು ನೈತಿಕ ವಿವೇಚನೆಯ ಅಭಿವೃದ್ಧಿಯನ್ನು ಬಯಸುವಷ್ಟರಮಟ್ಟಿಗೆ, ಪ್ರಾಥಮಿಕವಾಗಿ ಅನುಭವದ ಬೆಳಕಿನಲ್ಲಿ, ಎಲ್ಲಕ್ಕಿಂತ ಮೇಲಾಗಿ ಪರ್ಯಾಪ್ತವಾದ ಮತ್ತು ಎಡೆಬಿಡದ ಸಂತೃಪ್ತಿಗಳನ್ನು ಪೋಷಿಸುವಂತೆ ವರ್ತಮಾನ ವೈಯಕ್ತಿಕ ಮತ್ತು ಸಾಮಾಜಿಕ ಅಭ್ಯಾಸದ ಕುರಿತು ವಿಮರ್ಶಾತ್ಮಕವಾಗಿ ಚಿಂತಿಸಲು ಬೇಕಾದ ಸಾಮರ್ಥ್ಯದ ಅಭಿವೃದ್ಧಿಯೆಂಬುದಾಗಿ ತಿಳಿಯಲ್ಪಟ್ಟ, ಈ ಮೂರನೆಯ ದೃಷ್ಟಿಕೋನವನ್ನು ಅಪೇಕ್ಷಿಸುತ್ತದೆ. ವಿವೇಚನಾತ್ಮಕ ಆಯ್ಕೆಯೆಂಬುದು ಅನಾಸಕ್ತ, ತಟಸ್ಥ, ಸೈದ್ಧಾಂತಿಕ ನಿರ್ಣಯದ ಪರಿಣಾಮಗಳನ್ನು ಅನ್ವಯಿಸುವ ವಿಷಯವಲ್ಲ, ಬದಲಿಗೆ ವರ್ತಮಾನ ಸಾಮಾನ್ಯ ಯಶಸ್ವೀ ಅಭ್ಯಾಸಗಳನ್ನು ನಮ್ಮದೇ ಒಳಿತಿಗೋಸ್ಕರ, ನಮ್ಮದೇ ನಿರ್ದಿಷ್ಟ ಸನ್ನಿವೇಶಗಳಿಗೆ ಅನುಸಾರವಾಗಿ, ಅನುಸರಿಸುವ ಅಥವಾ ಸೂಕ್ತವಾಗಿ ಮಾರ್ಪಡಿಸುವ ವಿಷಯ. ವಿವೇಚನಾತ್ಮಕವಾಗಿ ತಿಳಿಸಲ್ಪಟ್ಟ ಪ್ರಾಯೋಗಿಕ ತಜ್ಞತೆಯನ್ನು ನಮ್ಮದೇ ಆದ ಉತ್ತಮ ಜೀವನವನ್ನು ನಿರಂತರವಾಗಿ ನಿರ್ಮಿಸಿಕೊಳ್ಳಲು ಬಳಕೆ ಮಾಡುವ ಪ್ರಶ್ನೆ ಇದಾಗಿದೆ.

## ನೈತಿಕ ಕಲಿಕೆಯ ಸಾಮಾಜಿಕ ಆಯಾಮ

ನಾನು ವಿವರಿಸಿದ ಎರಡೂ ಪ್ರಸ್ತಾವನೆಗಳಲ್ಲಿನ ಇನ್ನೊಂದು ಮೂಲಭೂತ ದೌರ್ಬಲ್ಯವೆಂದರೆ; ಅವೆರಡೂ ಪ್ರಾಧಮಿಕವಾಗಿ ನೀತಿವಂತ ವ್ಯಕ್ತಿಯ ಕಣಶಃ ದೃಷ್ಟಿಕೋನವನ್ನು ಹೊಂದಿವೆ. ಇದರಲ್ಲಿ ಶುದ್ಧ ವಿವೇಚನಾತ್ಮಕ ಹಿನ್ನೆಲೆಗಳಲ್ಲಿ ಅಥವಾ ನಮ್ಮ ಸಂತೃಪ್ತಿಗಳ ಬೆಂಬತ್ತುವಿಕೆಯಲ್ಲಿ ಏನು ಮಾಡಬೇಕೆಂದು ನಿಶ್ಚಯಿಸುವುದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮಾತ್ರ ನಾವು ವೈಯಕ್ತಿಕ ಸಂಬಂಧಗಳು ಮತ್ತು ಸಾಮಾಜಿಕ ವ್ಯವಸ್ಥೆಗಳಲ್ಲಿ ಒಟ್ಟಾಗಿ ಸೇರುತ್ತೇವೆಂದು ನಂಬಲಾಗಿದೆ. ಸಾಮಾಜಿಕ ಸಂಬಂಧಗಳು ನಮ್ಮ ವೈಯಕ್ತಿಕವಾಗಿ ನಿಶ್ಚಿತವಾದ ಗುರಿಗಳನ್ನು ಅತ್ಯುತ್ತಮವಾಗಿ ಸಾಧಿಸಿಕೊಳ್ಳಲು ನಮಗೋಸ್ಕರ ವಿನ್ಯಾಸಗೊಳಿಸಲ್ಪಟ್ಟ ಸಾಂದರ್ಭಿಕ ವ್ಯವಸ್ಥೆಗಳಷ್ಟೇ ಎಂದು ಭಾವಿಸಲಾಗಿವೆ. ಆದರೆ ಕೆಲವು ಮೂಲಭೂತ ಬೇಡಿಕೆಗಳು ಮತ್ತು ಬಯಕೆಗಳು ತಮ್ಮ ಸ್ವಭಾವದಲ್ಲಿ ಸಾಮಾಜಿಕವಾದವುಗಳಾಗಿದ್ದು, ಶುದ್ಧ ವೈಯಕ್ತಿಕ ನೆಲೆಯಲ್ಲಿ ಅವನ್ನು ತೃಪ್ತಿಗೊಳಿಸಲಾಗುವುದಿಲ್ಲ. ಹೆಚ್ಚೇನು, ಸಾಮಾಜಿಕ ಸಂಬಂಧಗಳಲ್ಲಿ; ವೈಯಕ್ತಿಕ, ಸಾಮಾಜಿಕ ಹಾಗೂ ಎಲ್ಲಾ ವಿಧದ ಬೇಡಿಕೆ ಮತ್ತು ಬಯಕೆಗಳ ಸಂತೃಪ್ತಿಯನ್ನು ಅತ್ಯಂತ ಹೆಚ್ಚು ಸೂಕ್ಷ್ಮಾಭಿರುಚಿಯೊಂದಿಗೆ ಮತ್ತು ಪರ್ಯಾಪ್ತವಾದ ರೀತಿಗಳಲ್ಲಿ ಬೆಂಬತ್ತಬಹುದು. ವೈಯಕ್ತಿಕವಾಗಿ ನೆನೆಸಿಕೊಳ್ಳಲಾಗದ  ಅಭ್ಯಾಸಗಳನ್ನು ಇತರರ ಸಹವಾಸದಲ್ಲಿ ರಚಿಸಿಕೊಳ್ಳಬಹುದು. ನಾನು ಈ ಮೊದಲೇ ಒತ್ತಿ ಹೇಳಿದಂತೆ, ಯಾವುದರ ಮೂಲಕ ಮಾತ್ರ ವಿವೇಚನಾತ್ಮಕ ಅಭ್ಯಾಸಗಳನ್ನು ವ್ಯವಸ್ಥಿತವಾಗಿ ಬೆಳೆಸಿಕೊಳ್ಳಬಹುದೋ ಅಂಥ ಪಾಲ್ಗೊಳ್ಳುವಿಕೆಯುಳ್ಳ ಸಾರ್ವಜನಿಕ ಭಾಷೆಯ ನಿರ್ಮಾಣವು ಈ ಎಲ್ಲಾ ಸಾಧ್ಯತೆಗಳ ಅಂತರಾಳದಲ್ಲಿದೆ. ಆದರೆ ವರ್ತಮಾನದ ಸಾಮಾಜಿಕ ಅಭ್ಯಾಸಗಳಲ್ಲಿ, ಅವುಗಳ ಎಲ್ಲಾ ವಿವಿಧ ಸಂಕೀರ್ಣ ಲಕ್ಷಣಗಳನ್ನೊಳಗೊಂಡಂತೆ, ನಮಗೆ ಸಹಜವಾಗಿ ಪ್ರಾಪ್ತವಾದ ಬೇಡಿಕೆಗಳು ಮತ್ತು ಬಯಕೆಗಳು ನಮ್ಮ ಹುಟ್ಟಿದ ಕ್ಷಣದಿಂದಲೇ ಆರಂಭಿಸಿ, ಸಾಮಾಜಿಕವಾಗಿ ನಿರ್ಧರಿಸಲ್ಪಟ್ಟ ರೀತಿಗಳಲ್ಲಿ, ಬೇರ್ಪಡಿಸಲ್ಪಡುತ್ತವೆಯಲ್ಲದೆ, ಅವು ರೂಪಿಸಲ್ಪಟ್ಟು, ರೂಪಾಂತರಿಸುವ ಪ್ರಕ್ರಿಯೆಗೂ ಒಳಪಡುತ್ತವೆ. ಒಂದು ಅತ್ಯಂತ ಮೂಲಭೂತ ಅರ್ಥದಲ್ಲಿ, ವ್ಯಕ್ತಿಗಳನ್ನು ನಾವು ಸಾಮಾಜಿಕ ಉತ್ಪನ್ನಗಳೆಂದು

ತಿಳಿದಿದ್ದೇವೆ. ನಾವು ವ್ಯಕ್ತಿಗಳಾಗಿ ಏನಾಗಿರುವೆವೋ ಅದು ಸಾಧ್ಯವಾಗಿರುವುದು; ನಾವು ಆಲೋಚಿಸುವ, ಅನುಭಾವಿಸುವ ಮತ್ತು ಕಾರ್ಯವೆಸಗುವ ರೀತಿಗಳನ್ನು ಒಟ್ಟಾಗಿ ಸಂಘಟಿಸುವ ಸಾಮಾಜಿಕವಾಗಿ ರಚಿತವಾದ ಸಂಬಂಧಗಳು ಮತ್ತು ಅಭ್ಯಾಸಗಳ ಜಾಲದ ಉತ್ಕೃಷ್ಟತೆಯಿಂದಾಗಿ ಮಾತ್ರ. ಮಾನವ ವ್ಯಕ್ತಿಯಾಗಿರುವುದೆಂದರೆ ಯಾವುದರ ಸೀಮೆಯಲ್ಲಿ ಬಗೆಬಗೆಯ ಮಾನವ ಸಂತೃಪ್ತಿಗಳ ಪ್ರಕಾರಗಳು ಬೆಂಬತ್ತಲ್ಪಡುತ್ತವೆಯೋ ಅಂಥ ನಿರ್ದಿಷ್ಟ, ಸಾಮಾಜಿಕವಾಗಿ ರಚಿತವಾದ ಪದ್ಧತಿಗಳ ಸಂಕಲನದಲ್ಲಿ ಬದುಕನ್ನು ತೊಡಗಿಸಿಕೊಳ್ಳುವುದು ಮತ್ತು ಅದನ್ನು ಪಾರಂಪರ್ಯವಾಗಿ ಪಡೆಯುವುದು ಎಂದು ಅರ್ಥ. ಈ ಮಾತುಗಳಲ್ಲಿ ನೈತಿಕ ಜೀವನವು ನಾವು ಒಳಗೊಳ್ಳುವ ಸಾಮಾಜಿಕ ಸಮೂಹಗಳಲ್ಲಿ ಲಭ್ಯವಾದ ಸಾಧ್ಯತೆಗಳಿಂದ ವೈಯಕ್ತಿಕವಾಗಿ ಬೆಳೆಸಿಕೊಂಡ ವಿವೇಚನಾತ್ಮಕ ಜೀವನದ ಬೆಂಬತ್ತುವಿಕೆಯೆಂದು ತಿಳಿಯಲ್ಪಡಬೇಕು. ಆದರೆ ಇದು ಅಸ್ತಿತ್ವದಲ್ಲಿರುವ ಪದ್ಧತಿಗಳಿಗೆ ಅವುಗಳು ಯಾವುದೇ ಆಯ್ಕೆಗೆ ಅನುಮತಿ ಕೊಡುವುದಿಲ್ಲವೆಂಬ ಅಥವಾ ಅವುಗಳಷ್ಟಕ್ಕೆ ಮಾರ್ಪಾಟಿಗೆ ಮುಕ್ತವಾಗಿಲ್ಲವೆಂಬ ಸರಳವಾದ ಅರ್ಥಕೊಡುವುದಿಲ್ಲ. ಒಳ್ಳೆಯ, ನೈತಿಕ ಮತ್ತು ವಿವೇಚನಾತ್ಮಕ ಜೀವನದ ಕಲ್ಪನೆಯು ತಾನೇ ಒಂದು ಸಾಮಾಜಿಕ ನಿರ್ಮಿತಿಯಾಗಿದೆ ಹಾಗೂ ವ್ಯಕ್ತಿಗಳು ವಿಮರ್ಶಾತ್ಮಕವಾಗಿ ಚಿಂತನಾತ್ಮಕವಾದ ವೈಯಕ್ತಿಕ ಪ್ರತಿಕ್ರಿಯೆಯ ಅಭ್ಯಾಸಗಳ ಮೇಲೆ ಹಿಡಿತ ಹೊಂದುವ ಮೂಲಕ ಅದರಲ್ಲಿ ತೊಡಗಿಸಲ್ಪಟ್ಟಲ್ಲಿ ಮಾತ್ರ ಅದನ್ನು ಹೊಂದಬಹುದು. ನಾವು ಮಾನವ ಸಮಾಜಗಳಲ್ಲಿ ನಿರ್ದಿಷ್ಟ ಅಭ್ಯಾಸಗಳು ಹಾಗೂ ಮಾನವ ಬೇಡಿಕೆಗಳು ಮತ್ತು ಬಯಕೆಗಳನ್ನು ಸಂತೃಪ್ತಿಗೊಳಿಸಲೋಸ್ಕರ ನಿರ್ದಿಷ್ಟ ಅಭ್ಯಾಸಗಳು ಮತ್ತು ವಿಧಾನಗಳ ಅಪಾರವಾದ ವೈವಿಧ್ಯವನ್ನು ರಚಿಸಿದ್ದೇವೆ. ಇವುಗಳ ಸೀಮೆಯೊಳಗೇ ನಾವು ನಿರ್ಮಾಣಗೊಂಡಿದ್ದೇವೆ. ಆದರೆ ಇವು ನಮಗೆ ವೈಯಕ್ತಿಕವಾಗಿ ವಿವೇಚನಾತ್ಮಕವಾಗಿದ್ದು; - ಸಾದ್ಯಂತವಾದ ಮತ್ತು ಪರಿಗಣಿತವಾದ ಅರ್ಥದಲ್ಲಿ ಬೇರೆ ಬೇರೆ ಪ್ರಮಾಣಗಳಲ್ಲಿ ನಮ್ಮನ್ನು ಕೃತಕೃತ್ಯಗೊಳಿಸುವಂತಿವೆ. ವಿವೇಚನಾತ್ಮಕವಾಗಿ ಅಭಿವೃದ್ಧಿಪಡಿಸಲಾದ ಅಭ್ಯಾಸಗಳನ್ನು ವಾಸ್ತವಿಕ ವಿವೇಚನೆಯ ಕಸರತ್ತಿನಲ್ಲಿಯೇ ಪರಿಗಣನೆಗೆ ತೆಗೆದುಕೊಳ್ಳುವಷ್ಟರ ಮಟ್ಟಿಗೆ ನಾವು  ನೈತಿಕ ಜೀವನವನ್ನು ಬದುಕಲು ವೈಯಕ್ತಿಕ ನೆಲೆಯಲ್ಲಿ ಆಶಿಸಬಹುದು ಹಾಗೂ ಇನ್ನೂ ಹೆಚ್ಚು ವಿವೇಚನಾತ್ಮಕ, ವೈಯಕ್ತಿಕ ಮತ್ತು ಸಾಮಾಜಿಕ ಅಭ್ಯಾಸಗಳನ್ನು ಸಮಾಜದಲ್ಲಿ ಅಭಿವೃದ್ಧಿಪಡಿಸಲು ಕೊಡುಗೆ ನೀಡಬಹುದು.

ನನ್ನ ಮೊದಲ ಎರಡು ಮಾದರಿಗಳನ್ನು ಆಧರಿಸಿದ ನೈತಿಕ ಶಿಕ್ಷಣದಲ್ಲಿ; ಅನಾಸಕ್ತ ವೈಯಕ್ತಿಕ ವಿವೇಚನಾತ್ಮಕ ಆಯ್ಕೆಯು ನೈತಿಕ ಜೀವನದ ಅಡಿಪಾಯವಾಗಿದ್ದು, ನಿರ್ದಿಷ್ಟ ಸಾಮಾಜಿಕ ಅಭ್ಯಾಸಗಳು ಸಂಬಂಧಿಸಿದ ಎಲ್ಲರಿಗೋಸ್ಕರ ಈ ಮಾತುಗಳಲ್ಲಿ ಸಮರ್ಥಿಸಲ್ಪಡಬಹುದೆಂದು ನಮಗೆ ವಿಶ್ವಾಸವಿದ್ದರೆ ಮಾತ್ರ ನಾವು ನೇರವಾಗಿ ಅಂಥ ಅಭ್ಯಾಸಗಳನ್ನು ಕಲಿಸಬಹುದು. ನಿಜವಾಗಿ, ಎರಡನೆಯ ದೃಷ್ಟಿಕೋನದ ಪ್ರಕಾರ, ಅಸ್ತಿತ್ವದಲ್ಲಿರುವ ಯಾವುದೇ ಸಾಮಾಜಿಕ ಅಭ್ಯಾಸಗಳ ಮೇಲೆ ವಿಶ್ವಾಸದಿಂದ ನೇರವಾಗಿ ಕೈ ಇಡುವುದೆಂದರೆ (ಕಲಿಸಲು ಹೋಗುವುದೆಂದರೆ) ಸಾರಾಸಗಟಾಗಿ ಯಾವುದೇ ವೈಯಕ್ತಿಕ ಆಯ್ಕೆಯ ಮೇಲೆ ಅತಿಯಾಗಿ ನಿರ್ಬಂಧ ಹೇರುವುದೆಂದಾಗುತ್ತದೆ. ಅಲ್ಪತರ ನಿರ್ದಿಷ್ಟತೆಯುಳ್ಳ ಗುರಿಗಳನ್ನು, ನಿರ್ದಿಷ್ಟ ಚಟುವಟಿಕೆಗಳಿಗೆ ಕದಲದ ಬದ್ಧತೆಗಿಂತ ವೈಯಕ್ತಿಕ ಸದ್ಗುಣಗಳ

ಸಂಕಲನಗಳನ್ನು ಬೆಂಬತ್ತುವುದು ಹೆಚ್ಚು ಒಳ್ಳೆಯದೆಂದು ಕೆಲವರು ಸಮರ್ಥಿಸುತ್ತಾರೆ. ನಾವು ಪ್ರಾಮಾಣಿಕವಾದ, ಎದೆಗಾರಿಕೆಯ, ಪರಹಿತ ಚಿಂತಕವಾದ, ಯುಕ್ತ ಮನಸ್ಸಿನ ವ್ಯಕ್ತಿಗಳನ್ನು ಅಭಿವೃದ್ಧಿಪಡಿಸಲು ನೋಡೋಣ, ಏಕೆಂದರೆ ಅಂಥಾ ಮೌಲ್ಯಗಳು ವ್ಯಾಪಕವಾಗಿ ವಿವಿಧ ವಾಸ್ತವಿಕ ಅಭ್ಯಾಸಗಳಿಂದ ವೈಯಕ್ತಿಕವಾಗಿ ಆಯ್ಕೆಮಾಡುವುದಕ್ಕೆ ಹಾಗೂ, ನಿಜಕ್ಕೂ, ಸ್ವಯಂಪ್ರೇರಿತವಾಗಿ ತಾನೇ ಹೊಸ ಅಭ್ಯಾಸಗಳನ್ನು ರಚಿಸಿಕೊಳ್ಳಲು ಹೊಂದುವಂತಿರುತ್ತವೆ. ಆದರೆ ನಾನು; ವ್ಯಕ್ತಿಗಳು ತೀರಾ ಆರಂಭದಿಂದಲೂ ಅವಶ್ಯವಾಗಿ ತಮ್ಮ ಬೇಡಿಕೆಗಳ ಸಂತೃಪ್ತಿಯ ನಿಟ್ಟಿನಲ್ಲಿ ಸಾಮಾಜಿಕ ಅಭ್ಯಾಸಗಳ ಕಡೆಗೆ ಉಪಕ್ರಮಿಸಲ್ಪಟ್ಟಿದ್ದು; ಅವರಿಗೆ ಪ್ರತ್ಯೇಕವಾದ ವಿವೇಚನಾತ್ಮಕ ಆಯ್ಕೆಮಾಡಿಕೊಳ್ಳಲು ಶಿಕ್ಷಣ ನೀಡುವ ಯೋಚನೆಯು ಅರ್ಥವಿಲ್ಲದ್ದು ಎಂದು ವಾದಿಸಿದ್ದೇನೆ. ತೀರಾ ಆರಂಭದಿಂದಲೂ ಶಿಕ್ಷಣವು; ತತ್ಕಾಲದಲ್ಲಿ ಸಮಾಜದಲ್ಲಿ ಲಭ್ಯವಿರುವ ಅತ್ಯಂತ ವಿವೇಚನಾತ್ಮಕ ಅಭ್ಯಾಸಗಳೆಂದು ಪರಿಗಣಿಸಲ್ಪಟ್ಟವುಗಳ ಬಗ್ಗೆ ವ್ಯಕ್ತಿಗಳನ್ನು ತೊಡಗಿಸುವುದರಿಂದ ಮಾತ್ರ ಮೇಲೇಳಬಲ್ಲುದು. ಹೆಚ್ಚೇನು, ಅಭ್ಯಾಸ-ಜಡವಾದ ನೈತಿಕ ಮೌಲ್ಯಗಳ ಸಂಕಲನವನ್ನು ಬೆಂಬತ್ತುವ ಯೋಚನೆಯೂ ಅಷ್ಟೇ ಅರ್ಥವಿಲ್ಲದ್ದು. ವಾಸ್ತವಿಕ ಚಟುವಟಿಕೆಗಳಲ್ಲಿ ತೊಡಗುವುದರಿಂದ ಮಾತ್ರ ಸದ್ಗುಣಗಳನ್ನು ಬೆಳೆಸಿಕೊಳ್ಳಬಹುದು ಮತ್ತು ಯಾವುದೇ ಅಭ್ಯಾಸಗಳನ್ನು ಆರಿಸಿಕೊಂಡರೂ, ಅವುಗಳ ಯಶಸ್ವೀ ಬೆಂಬತ್ತುವಿಕೆಯು ಆ ಅಭ್ಯಾಸಗಳಿಗೆ ವಿಶೇಷವಾಗಿರುವ ವೈಯಕ್ತಿಕ ಗುಣಗಳು ಅಥವಾ ಸದ್ಗುಣಗಳ ಕಾರ್ಯಾಚರಣೆಯನ್ನು ಅಪೇಕ್ಷಿಸುತ್ತದೆ. ಅದರಿಂದಾಗಿ ಯಾವುದೇ ಸಾಮಾಜಿಕ ಅಭ್ಯಾಸಕ್ಕೆ ತೊಡಗಿಸುವ ಪ್ರಕ್ರಿಯೆಯು,ಆ ಅಭ್ಯಾಸವು ಒಳಗೊಂಡಿರುವ ನಿರ್ದಿಷ್ಟ ಸದ್ಗುಣಗಳನ್ನು ಅವಶ್ಯವಾಗಿ ಬೆಳೆಸುತ್ತದೆ. ನೈತಿಕ ವಿವೇಚನೆಗಳ ಹಾಗೆಯೇ ನೈತಿಕ ಸದ್ಗುಣಗಳು ವಿದ್ಯಾರ್ಥಿಗಳಿಗೆ ನೈತಿಕ ಅಭ್ಯಾಸಗಳಲ್ಲಿ ಶಿಕ್ಷಣ ನೀಡುವುದರ ಉತ್ಪನ್ನಗಳಾಗಿರುತ್ತವೆ. ನೈತಿಕ ಶಿಕ್ಷಣವು; ನೈತಿಕ ವಿವೇಚನೆಯನ್ನು ಬೆಂಬತ್ತುವುದರಿಂದ ಮತ್ತು ಅದರ ಆದೇಶಗಳನ್ನು ಅನ್ವಯಿಸುವುದರಿಂದ ಅಥವಾ ಸ್ವತಂತ್ರವಾಗಿ ರೂಪಿಸಿದ ನೈತಿಕ ಸದ್ಗುಣಗಳ ಸಂಕಲನವನ್ನು ಬೆಂಬತ್ತುವ ಅಥವಾ ಅದರೊಂದಿಗೆ ಇದನ್ನು ಸ್ಥಾನಾಂತರಿಸುವ ಪ್ರಯತ್ನದಿಂದ ಸಾಧಿಸಲ್ಪಡುವುದಿಲ್ಲ. ನೈತಿಕ ಅಭ್ಯಾಸಗಳು ಸ್ವಭಾವತಃ ತಮ್ಮ ನಡವಳಿಕೆಗಾಗಿ ನೈತಿಕ ವಿವೇಚನೆ ಮತ್ತು ನೈತಿಕ ಸದ್ಗುಣಗಳ ಕಾರ್ಯಾಚರಣೆಯನ್ನು ಅಪೇಕ್ಷಿಸುವ ವಿವೇಚನಾತ್ಮಕ ಸಾಮಾಜಿಕ ಅಭ್ಯಾಸಗಳಾಗಿವೆ. ನೈತಿಕ ಶಿಕ್ಷಣವನ್ನು ಸುಸಂಬದ್ಧವಾಗಿ ನಡೆಸಬೇಕೆಂದರೆ, ಅಂತಹ ವಿವೇಚನಾತ್ಮಕ ಅಭ್ಯಾಸಗಳನ್ನೊಳಗೊಂಡ ಆರಂಭದ ಅವಶ್ಯಕತೆಯಿದ್ದು, ಆ ಮೂಲಕ ಅದು ನೈತಿಕ - ಅಂದರೆ, ವಾಸ್ತವಿಕ - ವಿವೇಚನೆ ಹಾಗೂ ವಿವೇಚನಾತ್ಮಕ ನೈತಿಕ ಸದ್ಗುಣಗಳನ್ನು ಬೆಳೆಸುವುದು.

## ನೈತಿಕ ಜೀವನದ ಲಕ್ಷಣಗಳು

ನಾನು ವಾದಿಸಿರುವ ನೈತಿಕ ಜೀವನದ ದೃಷ್ಟಿಕೋನವು ಈ ಕೆಳಗಿನ ಪ್ರಧಾನ ಲಕ್ಷಣಗಳನ್ನು ಹೊಂದಿದೆ:

1. ಮಾನವ ಜೀವಿಗಳು ತಮ್ಮ ಸ್ವಭಾವದಲ್ಲಿ ದೈಹಿಕ, ಮಾನಸಿಕ ಮತ್ತು ಸಾಮಾಜಿಕವಾದ ವ್ಯಾಪಕ ಬೇಡಿಕೆಗಳು ಮತ್ತು ಬಯಕೆಗಳನ್ನು ಹೊಂದಿರುತ್ತಾರೆಂಬ ಅಂಶವನ್ನುಅದು ದತ್ತವಾಗಿ ತೆಗೆದುಕೊಳ್ಳುತ್ತದೆ.
2. ಅವರು ತಮ್ಮ ಸ್ವಭಾವದಲ್ಲಿ ದೈಹಿಕ, ಜ್ಞಾನಾತ್ಮಕ, ಭಾವನಾತ್ಮಕ ಮತ್ತು ಸಹಜವಾದ ವ್ಯಾಪಕ ಸಾಮರ್ಥ್ಯಗಳನ್ನು ಹೊಂದಿರುತ್ತಾರೆಂದು ಸಹ ಅದು ದತ್ತವಾಗಿ ತೆಗೆದುಕೊಳ್ಳುತ್ತದೆ.
3. ನೈತಿಕತೆಯು ಮಾನವ ಬೇಡಿಕೆಗಳು ಮತ್ತು ಬಯಕೆಗಳನ್ನು ಅತ್ಯಂತ ಸಂಪೂರ್ಣವಾಗಿ ಸಂತೃಪ್ತಿಗೊಳಿಸುವ ಜೀವನದ ಶೈಲಿಗಳ ಅನ್ವೇಷಣೆಯಲ್ಲಿ ಜಾಗೃತವಾಗುವುದೆಂದು ಅದು ಗ್ರಹಿಸುತ್ತದೆ. ಆ ಅನ್ವೇಷಣೆಯು ಪ್ರಾಥಮಿಕವಾಗಿ, ಸಂತೃಪ್ತಿಗಳು ಪರಮಾವಧಿಗೇರುವ ನಿಟ್ಟಿನಲ್ಲಿ ಯಶಸ್ಸಿನ ಬೆಲೆಕಟ್ಟುವಂತಹ, ಒಂದು ಪ್ರಾಯೋಗಿಕ ವಿಷಯವಾಗಿದೆಯೆಂದು ತಿಳಿಯಲಾಗುತ್ತದೆ.
4. ಯಶಸ್ವೀ ನೈತಿಕ ಜೀವನದ ಪ್ರಕಾರಗಳು; ಚಿಂತನೆಯ, ಅನುಭಾವದ ಮತ್ತು ಕಾರ್ಯಾಚರಣೆಯ ನಮೂನೆಗಳು ಸಾಮಾಜಿಕ ಅಭ್ಯಾಸಗಳಾಗಿ ಸ್ಥಾಪಿಸಲ್ಪಡುವಂತಹ ಸಾಮಾಜಿಕ ಪ್ರಯೋಗದಲ್ಲಿ ಹೊರಹೊಮ್ಮುವಂಥವೆಂದು ಗ್ರಹಿಸಲಾಗುತ್ತದೆ. ದೈನಂದಿನ ಜೀವನದಲ್ಲಿ, ವೈಯಕ್ತಿಕ ಮತ್ತು ಸಾಮಾಜಿಕ ಸಂಬಂಧಗಳಲ್ಲಿ, ಕೈಗಾರಿಕೆ, ವಾಣಿಜ್ಯ, ಶಿಕ್ಷಣ, ಕಾನೂನು, ರಾಜಕೀಯ, ಧರ್ಮ, ಕಲೆಗಳು, ವಿಜ್ಞಾನ ವಿಷಯಗಳು ಮುಂತಾದವುಗಳ ಬೆಂಬತ್ತುವಿಕೆಯಲ್ಲಿ ಮಾನವ ಸಂತೃಪ್ತಿ ಮತ್ತು ಕೃತಕೃತ್ಯತೆಗಳು ಕಾಣಲ್ಪಡಬೇಕು.
5. ಯಶಸ್ವೀ ಅಭ್ಯಾಸಗಳ ನಡವಳಿಕೆ ಮತ್ತು ಅಭಿವೃದ್ಧಿಕೇಂದ್ರಿತವಾದ ಪ್ರಾಯೋಗಿಕ ಮತ್ತು ಸೈದ್ಧಾಂತಿಕ ವಿವೇಚನೆಯಲ್ಲಿ ನಮ್ಮ ಅರಿವಿನ ಸಾಮರ್ಥ್ಯದ ಚಲಾವಣೆಯಿರುತ್ತದೆ. ಹಂಚಿಕೊಳ್ಳಲ್ಪಟ್ಟ ಪರಿಕಲ್ಪನಾತ್ಮಕ ನಿರ್ಮಿತಿಗಳು, ವಾಸ್ತವಿಕ ವಿವೇಚನೆಯನ್ನು ಉಪಯೋಗಿಸುತ್ತಾ, ಯಶಸ್ವೀ ಅಭ್ಯಾಸಗಳ ವ್ಯವಸ್ಥಿತವಾದ ರಚನೆ ಮತ್ತು ಅಭಿವೃದ್ಧಿಗೆ ದಾರಿಮಾಡಿಕೊಟ್ಟಿವೆ. ಅಂತಹ ಅಭ್ಯಾಸಗಳ ಲಕ್ಷಣವು; ಸೈದ್ಧಾಂತಿಕ ವಿವೇಚನೆಯನ್ನು ಉಪಯೋಗಿಸಿಕೊಳ್ಳುತ್ತಾ, ಹೆಚ್ಚು ಪರ್ಯಾಪ್ತವಾಗಿ ತಿಳಿಯಲ್ಪಡುತ್ತದೆಯಲ್ಲದೆ, ಅವುಗಳ ಅಭಿವೃದ್ಧಿಯು ಹೆಚ್ಚು ಉದ್ದೇಶಪೂರ್ವಕವಾಗಿ ನಿರ್ದೇಶಿಸಲ್ಪಡುವುದು. ಹೀಗೆ ನೈತಿಕ ಜೀವನವು ವಿವೇಚನಾತ್ಮಕ ಅಭ್ಯಾಸಗಳ: ಅಂದರೆ, ಮಾನವ ಬೇಡಿಕೆಗಳು ಮತ್ತು ಬಯಕೆಗಳ ಸಂತೃಪ್ತಿಯನ್ನು ಪರಮಾವಧಿಗೇರಿಸುವಂತೆ ವಿವೇಚನೆಯ ಮೂಲಕ ಬೆಳೆಸಲ್ಪಟ್ಟ ಅಭ್ಯಾಸಗಳ ಒಂದು ಜೀವನವಾಗಿರುತ್ತದೆ.
6. ಸಾಮಾಜಿಕ ಅಭ್ಯಾಸಗಳಲ್ಲಿ ಭಾಗವಹಿಸುವಲ್ಲಿ; ಸಹಜವಾಗಿ ಪ್ರಾಪ್ತವಾದ ಯೋಚಿಸುವ, ಅನುಭಾವಿಸುವ ಮತ್ತು ಕಾರ್ಯಾಚರಿಸುವ ಸಾಮರ್ಥ್ಯಗಳು; ಬೇಡಿಕೆಗಳು ಮತ್ತು ಬಯಕೆಗಳನ್ನು ಅಭ್ಯಾಸಗಳು ಸಂತೃಪ್ತಿಗೊಳಿಸಲು ಯತ್ನಿಸುವ, ನಿರ್ದಿಷ್ಟ ರೀತಿಗಳಲ್ಲಿ ನಿರ್ಮಾಣಗೊಳ್ಳುತ್ತವೆ.

ಹೀಗೆ, ಒಬ್ಬ ಮಾನವ ಮನುಷ್ಯನನ್ನು ಅಭಿವೃದ್ಧಿಪಡಿಸುವುದೆಂದರೆ ಅಭ್ಯಾಸಗಳ ಸಂಕಲನದ ಮೂಲಕ ಒಬ್ಬ ವ್ಯಕ್ತಿಯ ಸಾಮರ್ಥ್ಯಗಳು, ಬೇಡಿಕೆಗಳು ಮತ್ತು ಬಯಕೆಗಳು ರಚಿತವಾಗುವುದು ಮತ್ತು ಕ್ರಮಬದ್ಧಗೊಳ್ಳುವುದು ಎಂಬುದಾಗಿದೆ. ಸಾಮಾಜಿಕವಾಗಿ ರಚಿತವಾದ ವಿವೇಚನಾತ್ಮಕ ಅಭ್ಯಾಸಗಳಿಗೆ ಪ್ರತಿಕ್ರಿಯೆ ನೀಡುವುದರ ಮೂಲಕವೇ ಒಬ್ಬ ವ್ಯಕ್ತಿಯು ತಾನು ಒಂದು ನೈತಿಕ ಜೀವನವನ್ನು ಬದುಕಲು, ನೈತಿಕ ವಿವೇಚನೆಯನ್ನು ಆಚರಣೆಗೆ ತರಲು ಪ್ರಾರಂಭಿಸುತ್ತಾನಲ್ಲದೆ, ನೈತಿಕ ಸದ್ಗುಣಗಳಿಂದ ಗುರುತಿಸಲ್ಪಡುತ್ತಾನೆ.

7. ಹೀಗೆ, ನೈತಿಕ ಜೀವನವೆಂಬುದು ಒಬ್ಬ ವ್ಯಕ್ತಿಗೆ ಅವನ ವ್ಯಕ್ತಿಗತ ಬೇಡಿಕೆಗಳು ಮತ್ತು ಬಯಕೆಗಳನ್ನು ಅತ್ಯಂತ ಯಶಸ್ವಿಯಾಗಿ ಸಂತೃಪ್ತಿಗೊಳಿಸುವಂತಹ ಜೀವನದ ಒಂದು ಪ್ರಕಾರವಾಗಿದೆ. ಅದು ಅಸ್ತಿತ್ವದಲ್ಲಿರುವ ಆದರೆ ಅಭಿವೃದ್ಧಿ ಹೊಂದುತ್ತಿರುವ ಸಾಮಾಜಿಕ ಅಭ್ಯಾಸಗಳ ಜಾಲದ ಸೀಮೆಯೊಳಗೆ ಬದುಕಲ್ಪಡಬೇಕು. ತನ್ನಷ್ಟಕ್ಕೇ ನಿರ್ದಿಷ್ಟ ವಿವೇಚನಾತ್ಮಕ ಅಭ್ಯಾಸಗಳಿಗೆ ಪ್ರತಿಕ್ರಿಯೆ ನೀಡುವ ಸಾದ್ಯಂತ ವಿವೇಚನಾತ್ಮಕ ಅಭ್ಯಾಸವಾಗಿರುವಷ್ಟರಮಟ್ಟಿಗೆ ಅದು ನಿರೂಪಿತ ಲಕ್ಷಣವುಳ್ಳ ಯಶಸ್ವೀ ಜೀವನಪ್ರಕಾರವಾಗಬಲ್ಲುದು. ಆ ಉದ್ದೇಶಕ್ಕಾಗಿ, ಸನ್ನಿವೇಶಗಳು ಬದಲಾದಂತೆಲ್ಲಾ ಸಾದ್ಯಂತ ಜೀವನದ ವಿನ್ಯಾಸ ಮತ್ತು ಅದರ ಮಾರ್ಪಡದ ಅಭ್ಯಾಸಗಳು ವಿವೇಚನಾತ್ಮಕ ಚಿಂತನೆಗೆ ಮತ್ತು ಮಾರ್ಪಾಡಿಗೆ ಸದಾ ಒಳಪಡುತ್ತವೆ.

8. ಈ ರೀತಿಯಲ್ಲಿ ಕಲ್ಪಿಸಲ್ಪಟ್ಟಿರುವ ನೈತಿಕ ಜೀವನವು, ಅದು ಆಧರಿಸಿರುವ ಬೇಡಿಕೆಗಳು ಮತ್ತು ಸಂತೃಪ್ತಿಗಳು ತಮ್ಮ ಸ್ವಭಾವದಲ್ಲಿ ಸಂಪೂರ್ಣವಾಗಿ ವೈಯಕ್ತಿಕವಾಗಿವೆಯೋ ಎಂಬಂತೆ, ಅವಶ್ಯವಾಗಿ ವ್ಯಕ್ತಿನಿಷ್ಠವಾದುದು ಮತ್ತು ಅಹಂಕೇಂದ್ರಿತವಾದುದು ಎಂದು ತಿಳಿಯಲ್ಪಡಬಾರದು. ಅದರ ಬದಲು, ಈ ಬೇಡಿಕೆಗಳು ಮತ್ತು ಸಂತೃಪ್ತಿಗಳು ತಮ್ಮ ಸ್ವಭಾವದಲ್ಲಿ ನಮ್ಮೊಳಗೆ ವೈಯಕ್ತಿಕವಾಗಿ ಅವುಗಳ ಮೊಟ್ಟಮೊದಲಿನ ಆವಿರ್ಭಾವದಿಂದಲೇ ಸಾಮಾಜಿಕವಾಗಿ ವಿನ್ಯಾಸಗೊಂಡವುಗಳು ಎಂಬಂತೆ ನೋಡಲ್ಪಡಬೇಕಾಗಿದೆ. ಹೀಗೆ, ನೈತಿಕ ಜೀವನದಲ್ಲಿನ ಅವುಗಳ ಈಡೇರಿಕೆಯು; ಸಾಮಾಜಿಕವಾಗಿ ಬೆಸೆಯುವ ಸಂತೃಪ್ತಿಗಳನ್ನು ಪರಮಾವಧಿಗೇರಿಸಲೋಸ್ಕರ ಅಭಿವೃದ್ಧಿಪಡಿಸಲ್ಪಟ್ಟ ಅಭ್ಯಾಸಗಳ ಜಾಲದಲ್ಲಿ ಕಾಣಲ್ಪಡಬೇಕು. ನೈತಿಕ ಜೀವನದ ವಿವೇಚನಾತ್ಮಕ ಅಭ್ಯಾಸಗಳು ತಮ್ಮ ಸ್ವಭಾವದಲ್ಲಿ ಸಾಮಾಜಿಕವಾಗಿ ನಿರ್ಮಾಣಗೊಂಡ ನಿಬಂಧನೆಗಳಲ್ಲಿ ವೈಯಕ್ತಿಕ ಕೃತಕೃತ್ಯತೆಯನ್ನು ಬೆಂಬತ್ತುವದಕ್ಕೋಸ್ಕರ ಅಭಿವೃದ್ಧಿಪಡಿಸಲ್ಪಟ್ಟವುಗಳಾಗಿವೆ ಎಂಬುದಾಗಿ ಇದನ್ನು ಸೂಕ್ತವಾಗಿ ಗ್ರಹಿಸಬಹುದು.

**ಸಾಮಾಜಿಕ ಅಭ್ಯಾಸಗಳಿಗೆ ಉಪಕ್ರಮವಾಗಿ(initiation) ನೈತಿಕ ಶಿಕ್ಷಣ**

ಅಂತಹ ನೈತಿಕ ಜೀವನವನ್ನು ಸಾಧಿಸಬೇಕೆಂದರೆ ನೈತಿಕ ಶಿಕ್ಷಣದಿಂದ ಈಗೇನು (ಪ್ರಯೋಜನ)? ನಾನು ಚರ್ಚಿಸುತ್ತಿರುವ ತತ್ತ್ವಶಾಸ್ತ್ರೀಯ ಪರಿಗಣನೆಗಳ ಆಧಾರದಲ್ಲಿ ಏನು ಹೇಳಲು ಸಾಧ್ಯ? ಸಾಮಂಜಸ್ಯದ ಉದ್ದೇಶದಿಂದ ಒಂದು ವಿಷಯವನ್ನು ಸ್ಪಷ್ಟವಾಗೊಳಿಸಬೇಕಿದೆ. ನೈತಿಕ ಶಿಕ್ಷಣವು ಸಾಮಾಜಿಕ ಅಭ್ಯಾಸದ ಒಂದು ಪ್ರಕಾರವೇ ಎಂಬಂತೆ ಪರಿಗಣಿಸಲ್ಪಡಬೇಕಾಗಿದೆ, ಆದ್ದರಿಂದಾಗಿ, ಅದರ ಅತ್ಯಂತ ಯಶಸ್ವೀ ಪ್ರಕಾರವು ಆ ಅಭ್ಯಾಸವನ್ನು ವಿವೇಚನಾತ್ಮಕವಾಗಿ ಅಭಿವೃದ್ಧಿಪಡಿಸುವುದರಿಂದ ಮಾತ್ರವೇ ಸಾಧಿಸಲ್ಪಡಲು ಸಾಧ್ಯ. ಆದರೂ, ಒಂದು ಸೈದ್ಧಾಂತಿಕ ಬೆಂಬತ್ತುವಿಕೆಯಾಗಿ, ತತ್ತ್ವಶಾಸ್ತ್ರೀಯ ಸ್ಪಷ್ಟನೆಯು ಆ ಅಭ್ಯಾಸದ ಹಿನ್ನೆಲೆಯಲ್ಲಿರುವ ಪೂರ್ವಕಲ್ಪನೆಗಳನ್ನು ಪರಿಷ್ಕರಿಸುವಂತೆ ನಮ್ಮನ್ನು ಪ್ರೇರಿಸಬಲ್ಲುದು, ಹಾಗೂ ನಾನು ಯಾವುದಕ್ಕಾಗಿ ವಾದಿಸಿದ್ದೇನೋ ಆ ನೈತಿಕ ಜೀವನದ ಕಲ್ಪನೆಯು ಯಶಸ್ವೀ ಅಭ್ಯಾಸವು ಯಾವುದರ ಸೀಮೆಯೊಳಗೆ ಅಭಿವೃದ್ಧಿಗೊಳ್ಳಬೇಕೋ ಅಂತಹ ಕೆಲವು ನಿಬಂಧನೆಗಳನ್ನು ಪ್ರದರ್ಶಿಸಲು ಬಯಸುತ್ತದೆ. ಆದ್ದರಿಂದ ಅವುಗಳ ಬಗ್ಗೆ ನಾನು ಸ್ಪಷ್ಟತೆಯಿಂದಿರಲು ಪ್ರಯತ್ನಿಸುತ್ತೇನೆ.

ನೈತಿಕ ಶಿಕ್ಷಣದ ವ್ಯವಹಾರವು ಆರಂಭದಿಂದಲೂ; ವಿವೇಚನಾತ್ಮಕ ಅಭಿವೃದ್ಧಿ ಹಾಗೂ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೇಡಿಕೆಗಳ ಸಂತೃಪ್ತಿ ಮತ್ತು ಪ್ರಾಪ್ತವಾದ ಸಾಮರ್ಥ್ಯಗಳ ಕಸರತ್ತನ್ನು ಈ ನಿಟ್ಟಿನಲ್ಲಿ ಬೆಳೆಸುವ ಬಗ್ಗೆ  ಕಾಳಜಿ ಹೊಂದಿರುವುದೆಂದು ಕಲ್ಪಿಸಿಕೊಳ್ಳಬೇಕು. ಆದರೆ ಅಷ್ಟೇ ಪ್ರಮಾಣದಲ್ಲಿ ವೈಯಕ್ತಿಕ ಬೇಡಿಕೆಗಳು ಮತ್ತು ಸಂತೃಪ್ತಿಗಳನ್ನು ನಿರ್ಮಾಣ ಮಾಡುವಂತಹ ಕೆಲವು ಅತ್ಯಂತ ನಿರ್ದಿಷ್ಟ ಸಾಮಾಜಿಕ ಅಭ್ಯಾಸಗಳು ಅವಶ್ಯವಾಗಿ ಆ ಶಿಕ್ಷಣದ ಮುಖ್ಯ ವಿಷಯವಾಗಿರಬೇಕೆಂದು ನಾವು ಪರಿಗಣಿಸತಕ್ಕದ್ದು. ಯಾವಾಗ ವ್ಯಕ್ತಿಗಳು ಅಂತಹ ಅಭ್ಯಾಸಗಳ ಕಡೆಗೆ ಪ್ರೇರಿಸಲ್ಪಡುತ್ತಾರೋ, ಆಗ ಅವರು ಯೋಚಿಸುವ, ಅನುಭಾವಿಸುವ ಮತ್ತು ಕಾರ್ಯಾಚರಿಸುವ ಪ್ರಕ್ರಿಯೆಗಳಲ್ಲಿ ಆ ಅಭ್ಯಾಸಗಳಲ್ಲಿ ಹಾಸುಹೊಕ್ಕಾಗಿರುವ ಲಕ್ಷಣಗಳು ಧಾರಣವಾಗಿರುತ್ತವೆ. ಏಕೆಂದರೆ ಅಭ್ಯಾಸಗಳು; ಜ್ಞಾನ, ನಂಬಿಕೆಗಳು, ಯಶಸ್ಸಿನ ನಿರ್ಣಾಯಕಗಳು, ನಿರ್ಣಯಗಳು, ಮೌಲ್ಯಗಳು, ಚಟುವಟಿಕೆಗಳು, ಕೌಶಲಗಳು, ಸ್ವಭಾವಗಳು, ಸದ್ಗುಣಗಳು, ಅನಿಸಿಕೆಗಳು ಮತ್ತು ಭಾವನೆಗಳಂತಹ ಅಂಶಗಳ ನಿಶ್ಚಿತವಾಗಿ ಸಂಕೀರ್ಣವಾದ,ಹಾಗೂ ಪರಸ್ಪರ ಸಂಬದ್ಧವಾದ ಕಟ್ಟುಗಳಾಗಿವೆ.

ನೈತಿಕ ಶಿಕ್ಷಣವು ಅಭಿವೃದ್ಧಿಪಡಿಸಲು ಬಯಸುವ ಅಭ್ಯಾಸಗಳು; ಒಬ್ಬ ವ್ಯಕ್ತಿಯ ವರ್ತಮಾನದ ಬೇಡಿಕೆಗಳು ಮತ್ತು ಸಂತೃಪ್ತಿಗಳನ್ನು ಹೇಗೆ ಪ್ರಗತಿಪರವಾಗಿ ಹೆಚ್ಚು ಹೆಚ್ಚು ವಿವೇಚನಾತ್ಮಕವಾಗಿ ಅಭಿವೃದ್ಧಿಪಡಿಸಬಹುದು ಎಂದು ನಿರ್ಣಯಿಸಲು ಅತ್ಯಂತ ಯೋಗ್ಯರಾಗಿರುವವರಿಂದ ಪ್ರತಿಯೊಂದು ಹಂತದಲ್ಲೂ ಆಯ್ಕೆಮಾಡಲ್ಪಡಬೇಕು. ಉದ್ಭವಿಸುವ ಬೇಡಿಕೆಗಳು ಮತ್ತು ಬಯಕೆಗಳು ಹಾಗೂ ನಿರ್ದಿಷ್ಟ ಸಾಮರ್ಥ್ಯಗಳಿಗೆ ಇದು ನಿಕಟವಾದ ಗಮನವನ್ನು ಅಪೇಕ್ಷಿಸುತ್ತದೆ. ಅತ್ಯಂತ ಮುಂಚಿನ ಹಂತಗಳಲ್ಲಿ ಅಭ್ಯಾಸಗಳು ಇತರರಿಂದ ಆಯ್ಕೆ ಮಾಡಲ್ಪಡಬೇಕು. ಆದರೆ ಬೇಡಿಕೆಗಳು, ಸಾಮರ್ಥ್ಯಗಳು ಮತ್ತು ಸಾಧನೆಗಳು ವಿವೇಚನಾತ್ಮಕವಾಗಿ ಅಭಿವೃದ್ಧಿ ಹೊಂದಿದಂತೆಲ್ಲಾ, ಪ್ರತಿಯೊಬ್ಬ ವ್ಯಕ್ತಿಯು ತನಗೆ ನೈತಿಕ ಜೀವನವನ್ನು ಸಂಘಟಿಸಿಕೊಡಬಲ್ಲ ಅಭ್ಯಾಸಗಳನ್ನು ತಾನೇ ನಿರ್ಣಯಿಸಬಲ್ಲವನಾಗುತ್ತಾನೆ. ಈ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತಾನು ಯಾವುದಕ್ಕೆ ಪ್ರೇರಿಸಲ್ಪಟ್ಟಿದ್ದಾನೋ ಅಂಥ ಅಭ್ಯಾಸಗಳನ್ನು

ಮಾರ್ಪಡಿಸಿಕೊಳ್ಳಲು, ತನ್ನ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಲು ಹಾಗೂ ಇತರ ಅಭ್ಯಾಸದ ಪ್ರಕಾರಗಳನ್ನು ವಿವೇಚನಾತ್ಮಕವಾಗಿ ಆಯ್ಕೆಮಾಡಿಕೊಳ್ಳಲು ಹೆಚ್ಚು ಪ್ರಗತಿಪರವಾಗಿ ಶಕ್ತನಾಗುತ್ತಾನೆ.

ಆದರೆ ಈ ಪರಿಗಣನೆಗಳು ಶಿಕ್ಷಣದ ವಿಷಯವಾಗಿ ಯಾವ ವರ್ತಮಾನದ ಸಾಮಾಜಿಕ ಅಭ್ಯಾಸಗಳ ಕಡೆಗೆ ಬೊಟ್ಟು ಮಾಡುತ್ತವೆ? ಅವು ಪರಸ್ಪರ ಬೆಸೆದುಕೊಳ್ಳುವವುಗಳಾದರೂ, ಮೂರು ವಿವಿಧ ಕ್ಷೇತ್ರಗಳಿಗೆ ಒಳಪಡುತ್ತವೆ ಎಂದು ನಾನು ಸೂಚಿಸುತ್ತೇನೆ. ಮೊದಲನೆಯದಾಗಿ, ಪ್ರತಿಯೊಬ್ಬನಿಗೂ ಆತನಿಗೆ ಪ್ರಾಪ್ತವಾದ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಸನ್ನಿವೇಶಗಳಲ್ಲಿ ಬೇಡಿಕೆಗಳು ಮತ್ತು ಬಯಕೆಗಳ ವಿವೇಚನಾತ್ಮಕ ಸಂತೃಪ್ತಿಯನ್ನು ಸಾಧಿಸಲು ಅವಶ್ಯಕವಾಗಿರುವ ಅತ್ಯಂತ ವೈವಿಧ್ಯಪೂರ್ಣವಾದ ಮೂಲಭೂತ ದೈನಂದಿನ ಅಭ್ಯಾಸಗಳಿವೆ. ಎರಡನೆಯದಾಗಿ, ಯಾವುದರಿಂದ ಒಬ್ಬ ವ್ಯಕ್ತಿಯು ವಿವೇಚನಾತ್ಮಕ ಜೀವನವನ್ನು ಬೆಳೆಯುತ್ತಿರುವ ಸ್ವಂತ ಬೇಡಿಕೆಗಳು, ಬಯಕೆಗಳು ಮತ್ತು ಸಾಮರ್ಥ್ಯಗಳಿಗೆ ಅನುಸಾರವಾಗಿ ನಿರ್ಮಿಸಿಕೊಳ್ಳಬಹುದೋ ಅಂತಹ ಅನೇಕ ಐಚ್ಛಿಕ ಅಭ್ಯಾಸಗಳಿವೆ. ಈ ಎರಡೂ ಅಭ್ಯಾಸದ ಪ್ರಕಾರಗಳು ಶಿಕ್ಷಣದಲ್ಲಿ ಆರಂಭದಿಂದಲೇ ತಮ್ಮ ಸ್ಥಾನವನ್ನು ಪಡೆದುಕೊಂಡಿರುವಂತೆ ತೋರುತ್ತದೆ. ಹಾಗಿದ್ದರೂ, ಪ್ರಗತಿಗೆ ಪೂರಕವಾಗಿ ಒಬ್ಬ ವ್ಯಕ್ತಿಯ ಜೀವನವು ತನ್ನ ವಿವೇಚನಾತ್ಮಕ ಲಕ್ಷಣವನ್ನು ಬೆಳೆಸಿಕೊಳ್ಳಬೇಕೆಂದರೆ, ಮೂರನೆಯ ಬಗೆಯ ಅಭ್ಯಾಸಗಳನ್ನು ಸೇರಿಸತಕ್ಕದ್ದು. ಮೊದಲ ಎರಡು ಪ್ರಕಾರದ ಅಭ್ಯಾಸಗಳನ್ನು ಕುರಿತಂತೆ ಇವು ವಿಮರ್ಶಾತ್ಮಕ ವಿವೇಚನಾತ್ಮಕ ಚಿಂತನೆಯ ಅಭ್ಯಾಸಗಳಾಗಿರುವುದರಿಂದ, ಇವು ಉನ್ನತ ಸ್ತರದವುಗಳಾಗಿವೆ. ಈ ಹೆಚ್ಚುವರಿ ಅಭ್ಯಾಸಗಳಿಂದಾಗಿ, ಈ ಮೊದಲೇ ಗಳಿಸಿದ ಅಭ್ಯಾಸಗಳನ್ನು ವೈಯಕ್ತಿಕ ನಿರ್ಣಯದ ಮೂಲಕ ಮಾರ್ಪಡಿಸಿಕೊಳ್ಳಬಹುದು. ಹಾಗೂ ಜೀವನದ ವಿವೇಚನಾತ್ಮಕ ಸ್ವಯಂ ನಿರ್ದೇಶನದ ಮೂಲಕ ಹೊಸ ಅಭ್ಯಾಸಗಳು ಬೆಂಬತ್ತಲ್ಪಡಬಹುದು. ಈ ಅಭ್ಯಾಸಗಳು, ನಾನು ವಿವರಿಸಿದ ವಿವೇಚನಾವಾದಿ ಮಾದರಿಯ ಗುರುತಾಗಿರುವ ಸ್ವತಂತ್ರ, ಅನಾಸಕ್ತ ಸ್ವಾಯತ್ತತೆಯಲ್ಲದಿದ್ದರೂ, ವಿವೇಚನಾತ್ಮಕ ಸ್ವಾಯತ್ತತೆಯ ಕಸರತ್ತು ಎಂಬಂತೆ ಕಾಣಲ್ಪಡಬಹುದಾಗಿವೆ. ಕೆಳಮಟ್ಟದ ಅಭ್ಯಾಸಗಳ ಮೇಲೆ ಮೊದಲೇ ಸ್ವಲ್ಪ ಪ್ರಭುತ್ವವನ್ನು ಸದಾ ಅಪೇಕ್ಷಿಸಿದರೂ, ವಿಮರ್ಶಾತ್ಮಕ ಚಿಂತನೆಯು ಪರಿಮಿತ ಸಂಖ್ಯೆಯ ಕೆಲವರಿಗೆ ಮಾತ್ರ ಶಕ್ಯವೆಂದಾಗಲೀ ಅಥವಾ ಅವಶ್ಯಕವೆಂದಾಗಲೀ ನೋಡಲ್ಪಡಬಾರದು. ಅದರ ಬೆಂಬತ್ತುವಿಕೆಯಿಲ್ಲದೆ, ವಿವೇಚನಾತ್ಮಕ ಸ್ವಯಂ ನಿರ್ಧಾರವು ಯಾವುದೇ ಅರ್ಥವತ್ತಾದ ರೀತಿಯಲ್ಲಿ ಸಂಭಾವ್ಯವಲ್ಲ ಹಾಗೂ ಮಾನವ ಬಯಕೆಯ ಆ ವಿಶಿಷ್ಟ ಪ್ರಕಾರ ಮತ್ತು ಅದರ ಸಂತೃಪ್ತಿಗಾಗಿ ಇರುವ ಸಾಮರ್ಥ್ಯಗಳು ಕೃತಕೃತ್ಯವಾಗದೆ ಉಳಿದುಬಿಡುತ್ತವೆ.

ಸೈದ್ಧಾಂತಿಕ ಅಥವಾ ಶೈಕ್ಷಣಿಕ ಜ್ಞಾನದ ವ್ಯವಸ್ಥಿತ ಬೆಂಬತ್ತುವಿಕೆಯ ಬಗ್ಗೆ ಕಾಳಜಿಯಿರುವವುಗಳು ನಮ್ಮಲ್ಲಿ ಹಲವರಿಗೆ ಲಭ್ಯವಾಗಿರುವ ಅಭ್ಯಾಸಗಳ ಪುಷ್ಕಳ ವೈವಿಧ್ಯದ ಮಧ್ಯೆ ಇವೆ. ಇವುಗಳು ನನ್ನ ಎರಡನೆಯ ಕ್ಷೇತ್ರಕ್ಕೆ ಒಳಪಡುತ್ತವೆಂದು ನನಗೆ ತೋರುತ್ತದೆಯಲ್ಲದೆ, ಅವು ಸಾಪೇಕ್ಷವಾಗಿ ಕೆಲವರ ಜೀವನದಲ್ಲಿ ಮಹತ್ತ್ವದ ಮೂಲತತ್ತ್ವಗಳಾಗಿ ಕಾಣಿಸಿಕೊಳ್ಳಬಹುದು. ಹಾಗಿದ್ದರೂ, ಅವುಗಳ ವಿಶಿಷ್ಟ ಸಾಧನೆಗಳು, ಪರೋಕ್ಷವಾಗಿಯೇ ಆದರೂ, ಎಲ್ಲಾ ಮೂರು ಕ್ಷೇತ್ರಗಳಲ್ಲಿನ ಅಭ್ಯಾಸಗಳ ವಿವೇಚನಾತ್ಮಕ ಅಭಿವೃದ್ಧಿಗೆ ಪ್ರಧಾನವಾಗಿ ಕೊಡುಗೆ ನೀಡುತ್ತವೆಯಾದ್ದರಿಂದ, ನಾನು ವಾದಿಸಿದಂತೆ, ಸಮಾಜದಲ್ಲಿ ಅವುಗಳ ಅಭಿವೃದ್ಧಿಯು ನಿರ್ಣಾಯಕವಾಗಿ

ಮುಖ್ಯವಾದದ್ದು. ನೈತಿಕ ಜೀವನವು ಅಪೇಕ್ಷಿಸುವ ವಿಮರ್ಶಾತ್ಮಕ ಚಿಂತನೆಯ ಅಭ್ಯಾಸಗಳ ಸಾಮಾಜಿಕ ಅಭಿವೃದ್ಧಿಯಲ್ಲಿ ಸೈದ್ಧಾಂತಿಕ ಅಥವಾ ಶೈಕ್ಷಣಿಕ ಜ್ಞಾನವು ಮುಖ್ಯವಾದದ್ದಾಗಿದೆ. ಹಾಗಿದ್ದರೂ, ಸೈದ್ಧಾಂತಿಕ ಅಭ್ಯಾಸಗಳ ಬಗ್ಗೆ ಪ್ರಭುತ್ವವು ವ್ಯಕ್ತಿಯ ನೈತಿಕ ಜೀವನದ ನಡವಳಿಕೆಗೆ ಸರ್ವೇಸಾಮಾನ್ಯವಾಗಿ ಅವಶ್ಯಕವಲ್ಲ. ನೈತಿಕ ಜೀವನವು ಅಪೇಕ್ಷಿಸುವ ವಿಮರ್ಶಾತ್ಮಕ ಚಿಂತನೆಯೇ ಸೈದ್ಧಾಂತಿಕ ವಿವೇಚನೆಯ ಪರಿಣಾಮಗಳ ತಿಳುವಳಿಕೆಯಲ್ಲಿನ ವಾಸ್ತವಿಕ ವಿವೇಚನೆಯ ವಿಷಯವಾಗಿದೆ. ಸೈದ್ಧಾಂತಿಕ ಅಭ್ಯಾಸಗಳಾದರೋ ಅವು ಬೇರೆಯೇ ವಿಷಯವಾಗಿವೆ.

ಈ ದೃಷ್ಟಿಕೋನದ ಪ್ರಕಾರ, ನೈತಿಕ ಶಿಕ್ಷಣವೆಂಬುದು ಅವಶ್ಯವಾಗಿ ಸದಾ ಅಭಿವೃದ್ಧಿ ಹೊಂದುತ್ತಿರುವ ಸಾಮಾಜಿಕ ಅಭ್ಯಾಸಗಳ ಜಾಲದೊಳಗೆ ಪ್ರೇರಿಸುವ ಮೂಲಕ ವಿವೇಚನಾತ್ಮಕವಾಗಿ ಕೃತಕೃತ್ಯಗೊಳಿಸುವ ಜೀವನದ ನಡವಳಿಕೆಯ ಶಿಕ್ಷಣವಾಗಿದೆ. ಅದು ಪ್ರತಿಯೊಂದು ಹಂತದಲ್ಲೂ  ವಿವೇಚನಾತ್ಮಕವಾಗಿ ಅಭಿವೃದ್ಧಿಗೊಳ್ಳುವ ಅರ್ಥದಲ್ಲಿ ವೈಯಕ್ತಿಕವಾಗಿ ಕೃತಕೃತ್ಯಗೊಳಿಸುವಂಥದ್ದಾಗಿದೆ ಎಂಬುದು ಅದರ ಸಮಗ್ರ ತಥ್ಯವಾಗಿದೆ(ಸೂಚಕ). ಒಬ್ಬ ವ್ಯಕ್ತಿಯ ಶಿಕ್ಷಣವು ಸಮಗ್ರವಾಗಿ ಹೆಚ್ಚು ಅಥವಾ ಕಡಿಮೆ ಪ್ರಮಾಣದ ಒಂದು ನೈತಿಕ ಶಿಕ್ಷಣವೇ ಹೌದು.  ಅಥವಾ ಅಲ್ಲದೆಯೂ ಇರಬಹುದು. ಆ ಸಮಗ್ರಕ್ಕೆ ಕೊಡುಗೆ ನೀಡುವ ಅಥವಾ ನೀಡದಿರುವಷ್ಟರ ಮಟ್ಟಿಗೆ ಅದರ ಭಾಗಗಳು ಮುಖ್ಯವಾಗುತ್ತವೆ. ಆದರೆ ಆ ಸಮಗ್ರದ ಒಳಗೆ, ನೈತಿಕ ಶಿಕ್ಷಣವು ವೈಯಕ್ತಿಕ, ಕೌಟುಂಬಿಕ, ಸಾಮುದಾಯಿಕ ಮತ್ತು ವ್ಯಾಪಕ ಸಾಮಾಜಿಕ ಸಂಬಂಧಗಳ ಬಗ್ಗೆ ಕಾರ್ಯಾಚರಿಸಬೇಕಾದ ಕೆಲವು ನಿರ್ದಿಷ್ಟ ಪ್ರಶ್ನೆಗಳ ಬಗ್ಗೆ ನೇರವಾದ ಕಾಳಜಿ ಹೊಂದಿರುವುದಾಗಿ ಬಹಳ ಸೂಕ್ಷ್ಮವಾಗಿ ಮತ್ತು ಅನೇಕ ಬಾರಿ ವ್ಯಾಖ್ಯಾನಿಸಲಾಗಿದೆ. ಆದರೆ ಯಾವ ಅಭ್ಯಾಸಗಳ ಜಾಲದಲ್ಲಿ ಆ ಸಂಬಂಧಗಳು ಅಸ್ತಿತ್ವದಲ್ಲಿವೆಯೋ, ಯಾವುದರ ಆಂತರ್ಯದಲ್ಲಿ ಮಾತ್ರವೇ  ಅವುಗಳು ಸರಿಯಾಗಿ ತಿಳಿಯಲ್ಪಡಬಹುದೋ ಅಂತಹ ಅಭ್ಯಾಸಗಳ ಜಾಲವು ಮುಖ್ಯವಾಗುವುದು.  ಭಾಗವಹಿಸುವವರು ಮತ್ತು ಇತರರು ಯಾವುದರಲ್ಲಿ ಏಳಿಗೆ ಹೊಂದುತ್ತಾರೋ ಮತ್ತು ಆ ಮೂಲಕ ವ್ಯಕ್ತಿಗತವಾಗಿ ಕೃತಕೃತ್ಯರಾಗುತ್ತಾರೋ ಅಂತಹ ಬೆಂಬತ್ತುವಿಕೆಗಳಾಗಿ ಆ ಅಭ್ಯಾಸಗಳು ಮತ್ತು ಚಟುವಟಿಕೆಗಳು ಪ್ರಸ್ತುತವಾಗುತ್ತವೆ. ಈ ಸೂಕ್ಷ್ಮ ಅರ್ಥದಲ್ಲಿ ನೈತಿಕ ಶಿಕ್ಷಣವು; ವಿದ್ಯಾರ್ಥಿಗಳು ಪ್ರಗತಿಪರವಾಗಿ ಕೃತಕೃತ್ಯವಾಗುವ ಜೀವನವನ್ನು ಸಂಘಟಿಸುವುದೆಂದು ನಾವು ಪರಿಗಣಿಸುವ ಆ ವೈಯಕ್ತಿಕ ಮತ್ತು ಸಾಮಾಜಿಕ ಅಭ್ಯಾಸಗಳ ಕಡೆಗೆ ಪ್ರೇರಿಸುವಂಥದ್ದಾಗಿರಬೇಕು. ಅದನ್ನು ಸರ್ವಸಾಮಾನ್ಯವಾದ ತತ್ತ್ವಗಳ ಒಂದು ಸಂಕಲಿತ ತಿಳುವಳಿಕೆಯಲ್ಲಿ ಅಭ್ಯಾಸಮಾಡಲು ಬೇಕಾದ ವಿವೇಚನಯೆಡೆಗಿನಪ್ರೇರಣೆಗೆ ಇಳಿಸುವುದೆಂದರೆ ಅದರ ನಿಜವಾದ ವಾಸ್ತವಿಕ ಲಕ್ಷಣವನ್ನು ಇಲ್ಲವಾಗಿಸಿದಂತೆ. ವೈಯಕ್ತಿಕ ಕೃತಕೃತ್ಯತೆಯಿಂದ ಸೈದ್ಧಾಂತಿಕ ಸಾಧನೆಯ ಕಡೆಗೆ ಅದರ ದೃಷ್ಟಿಯನ್ನು ಹರಿಸುವುದರಿಂದ. ಸಮಗ್ರ ವ್ಯವಹಾರದ ಮೂಲಭೂತ ಮಹತ್ತ್ವ ಮತ್ತು ಪ್ರಚೋದನೆಯನ್ನು ಬರಿದುಮಾಡಿದಂತಾಗುತ್ತದೆ. ಅಭ್ಯಾಸಗಳ ಕಡೆಗೆ ಪ್ರೇರಣಗೆ ತೊಡಗಿದ ನಂತರ; ವೈಯಕ್ತಿಕವಾಗಿ ಕೃತಕೃತ್ಯಗೊಳಿಸುವ ಅಭ್ಯಾಸಗಳನ್ನೇ ಬೆಂಬತ್ತುವುದರ ಬದಲಾಗಿ, ಸದ್ಗುಣಗಳ ಒಂದು ಸಂಕಲನವನ್ನು ಅಭಿವೃದ್ಧಿಪಡಿಸುವುದರತ್ತ ನಮ್ಮ ದೃಷ್ಟಿಯನ್ನು ಹೊರಳಿಸುವುದರಿಂದ ಈ ವ್ಯವಹಾರವನ್ನು ಮತ್ತೆ ಅಪಾರ್ಥಮಾಡಿಕೊಂಡಂತಾಗುತ್ತದೆ.

ನೈತಿಕ ಶಿಕ್ಷಣವು ವಿವೇಚನೆ ಹಾಗೂ ವಾಸ್ತವಿಕ ವಿವೇಚನೆಯ ಬಗ್ಗೆ ಕಾಳಜಿ ಹೊಂದಿದೆ. ಅದು ಸದ್ಗುಣಗಳ ಬಗ್ಗೆಯೂ ಕಾಳಜಿ ಹೊಂದಿದೆ. ಆದರೆ ಕಿರಿಯರನ್ನು; ಮನೆಯಲ್ಲಿ, ಶಾಲೆಯಲ್ಲಿ ಮತ್ತು ಅವರ ವಾಸ್ತವ್ಯದ ವ್ಯಾಪಕ ಸಂದರ್ಭಗಳಲ್ಲಿ, ಅವರು ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಕೃತಕೃತ್ಯರಾಗಿರುವುದಾಗಿ ಕಂಡುಕೊಳ್ಳುವ ವಿಕಾಸಶೀಲ ಅಭ್ಯಾಸಗಳ ಜಾಲದಲ್ಲಿ, ಅವರ ವಿಕಾಸಗೊಳ್ಳುವ ಅವಶ್ಯಕತೆಗಳು, ಬೇಡಿಕೆಗಳು, ಆಸಕ್ತಿಗಳು ಮತ್ತು ಅವರ ಸಾಮರ್ಥ್ಯಗಳ ಬಳಕೆಯ ಸಂತೃಪ್ತಿಗಳ ಸಂಪೂರ್ಣ ಸಂಭಾವ್ಯ ವ್ಯಾಪ್ತಿಯ ಉದ್ದಗಲಕ್ಕೆ ಶಿಕ್ಷಿತರನ್ನಾಗಿಸದೆ ಅವುಗಳು ಸರಿಯಾಗಿ ಸಾಧಿಸಲ್ಪಡುವುದಿಲ್ಲ. ಕಿರಿಯರನ್ನು ಯಾವುದರ ಕಡೆಗೆ ಪ್ರೇರಿಸುತ್ತೇವೋ ಅಂತಹ ದೈನಂದಿನ ಜೀವನದ ಅಭ್ಯಾಸಗಳ ವಿವರಗಳಿಗೆ ನಾವು ಇಳಿಯುವವರೆಗೆ, ನಮ್ಮ ಆ ಕೆಲಸದ ನಿರ್ವಹಣೆಯು ಅಸಮರ್ಪಕವಾಗಿರುತ್ತದೆ.. ಒಳ್ಳೆಯದಕ್ಕೋ ಅಥವಾ ಕೆಟ್ಟದ್ದಕ್ಕೋ, ನೈತಿಕ ಶಿಕ್ಷಣಕ್ಕೆ ನಾವು ಏನನ್ನು ತುಂಬಿಸುತ್ತೇವೋ ಅದನ್ನೇ ಮರಳಿ ಪಡೆಯುತ್ತೇವೆ: ಯಾವುದಕ್ಕೆ ನಾವು ಅವರನ್ನು ಪ್ರೇರಿಸುತ್ತೇವೋ ಅಂಥ ಅಭ್ಯಾಸಗಳಿಂದ - ಅಂದರೆ, ಆ ನಂಬಿಕೆಗಳು, ಚಟುವಟಿಕೆಗಳು, ಸ್ವಭಾವಗಳು, ಭಾವಗಳು, ವಿವೇಚನಾಶೀಲತೆ, ಕೌಶಲಗಳು ಮೊದಲಾದವುಗಳಿಂದ ಜೀವನಗಳು ರೂಪಿಸಲ್ಪಡುತ್ತವೆ. ಆದರೆ ಅಷ್ಟರಮಟ್ಟಿಗೆ ಮಾತ್ರ ಈ ಬೆಂಬತ್ತುವಿಕೆಗಳಲ್ಲಿ ಅವರು ವೈಯಕ್ತಿಕವಾಗಿ ತಮ್ಮ ಸಾಮಾಜಿಕವಾಗಿ ವಿಕಾಸಗೊಳ್ಳುವ ಬಯಕೆಗಳ ಸಂತೃಪ್ತಿಯನ್ನು ಕಾಣಬಲ್ಲರು. ನಾವೇನು ಕೊಡಮಾಡುತ್ತೇವೋ ಅದರಲ್ಲಿ ಕಿರಿಯರು ತಮಗೋಸ್ಕರ ಯಾವಾಗ ಏನನ್ನೂ ಕಾಣಲಾರರೋ ಆಗ, ಅವರು ಅದನ್ನು - ಸರಿಯಾಗಿಯೇ - ತಿರಸ್ಕರಿಸುತ್ತಾರಲ್ಲದೆ, ಇತರೆ ವಿಷಯಗಳ ಕಡೆಗೆ ಗಮನಹರಿಸುತ್ತಾರೆ.. ಮುಂದಿನ ಪೀಳಿಗೆಯು ಅರ್ಥಪೂರ್ಣವಾಗಿ ನೈತಿಕವಾಗಿ ಶಿಕ್ಷಿತಗೊಳಿಸಲ್ಪಡಬೇಕಿದ್ದರೆ ನಾವು ಕೊಡಮಾಡುವದರಲ್ಲಿ ಅವರು; ವ್ಯಕ್ತಿಗತವಾದ ಸಂತೃಪ್ತಿ ಮತ್ತು ಕೃತಕೃತ್ಯತೆಯನ್ನು ತಂದುಕೊಡುವಂಥ ಜೀವನದ ವಿವೇಚನಾತ್ಮಕ ಅಭ್ಯಾಸಗಳನ್ನು ಕಾಣುವುದು ಅವಶ್ಯ ಎಂಬುದನ್ನು ನಾವು ನಿಚ್ಚಳವಾಗಿ ತಿಳಿಯಬೇಕು. ಅವರಿಗೆ ಬರೀ ಸ್ವತಂತ್ರವಾಗಿ ವ್ಯುತ್ಪನ್ನಗೊಂಡ ತತ್ತ್ವಗಳನ್ನು, ಸದ್ಗುಣಗಳನ್ನು ಅಥವಾ ಈ ಎರಡನ್ನೂ ಕೊಡಮಾಡುತ್ತಾ, ಅವುಗಳನ್ನಾಧರಿಸಿದ ಜೀವನವನ್ನು ಬದುಕುವಂತೆ ತಿಳಿಸಿದಲ್ಲಿ, ಅವರು ಅದರ ಯಾವ ಅಂಶವನ್ನೂ ಸ್ವೀಕರಿಸುವುದಿಲ್ಲ. ಏಕೆಂದರೆ ಈ ರೀತಿ ಮುಂದಿರಿಸಲ್ಪಟ್ಟದ್ದು ಆಧುನಿಕ ಜಗತ್ತಿನಲ್ಲಿ, ಮಿತ್ರಸಮೂಹದವರು(Quakers) ಹೇಳುವಂತೆ, 'ಅವರ ಪರಿಸ್ಥಿತಿಗೆ ಸೂಕ್ತವಾಗಿ ಸ್ಪಂದಿಸುವುದಿಲ್ಲ'. ಅವರಿಗೆ ಬೇಕಾಗಿರುವುದು; ಇಲ್ಲಿ ಮತ್ತು ಈಗ ಅವರ ಎದುರಿಗೆ ಇರುವ ನಿರ್ದಿಷ್ಟ ಅಭ್ಯಾಸಗಳಲ್ಲಿ ಅತ್ಯುತ್ತಮವಾಗಿ ಹೇಗೆ ಬದುಕಬೇಕೆಂಬ ಬಗ್ಗೆ ಸಹಾಯ ಮತ್ತು ಮಾರ್ಗದರ್ಶನ. ನಾವು ಉಪದೇಶ ಮಾಡುವುದನ್ನು ನಿಲ್ಲಿಸಿ; ಮನೆ, ಶಾಲೆ, ಚರ್ಚು, ಸಮುದಾಯ, ಸಮಾನ ಮನಸ್ಕ ಗುಂಪು ಮತ್ತು ನಮ್ಮ ಸಮಕಾಲೀನ ಜಗತ್ತಿನಲ್ಲಿ ಅವರು ತಮ್ಮ ಬದುಕಿನ ಸ್ವರೂಪವನ್ನು ರೂಪಿಸುವ ಉಳಿದ ಎಲ್ಲಾ ಕಡೆಯ ಅಭ್ಯಾಸಗಳಲ್ಲಿ, ಉತ್ತಮ ಬದುಕನ್ನು ಕಾಣುವ ರೀತಿಯಲ್ಲಿ ಅವರನ್ನು ಪ್ರೇರಿಸುವಂತಹ ವ್ಯವಹಾರಕ್ಕೆ ಇಳಿಯಬೇಕಾಗಿದೆ. ಅವರು ಆ ವರ್ತಮಾನ ಸಂದರ್ಭವನ್ನು ತಪ್ಪಿಸಿಕೊಳ್ಳಲಾರರು ಅಥವಾ ಆಂತರಂಗಿಕವಾಗಿಯಲ್ಲದೆ ಅದನ್ನು ಗಮನೀಯವಾಗಿ ಮಾರ್ಪಡಿಸಲಾರರು. ಅವರು ವಾಸ್ತವಿಕವಾಗಿ ಎಲ್ಲಿ ಇರುವರೋ ಅಲ್ಲಿಂದಲೇ ವಿಷಯಗಳನ್ನು ನಿಭಾಯಿಸಲು ನಾವು ಅವರಿಗೆ ಸಹಾಯ ಮಾಡಬೇಕು.